SRI H. D. DEVEGOWDA.—I beg to move :

"That the statement of Dr. M. D. Nataraj, published in Lok Vani, dated 2nd September 1974 is a breach of privilege of the Members of the House and it involves the contempt of the House also and may be referred to the Committee of Privileges for Enquiry."

MADAM SPEAKER.—The question is :

"That the statement of Dr. M. D. Nataraj, published in Lok Vani, dated 2nd September 1974, is a Breach of privilege of the Members of the House and it involves the contempt of the House also and may be referred to the Committee of Privileges for Enquiry."

The motion was adopted and was referred to the Committee of Privilages.

ಶ್ರೀ ಎಚ್. ಡಿ. ದೇವೇಗೌಡ.—ನಾನು ಈ ಸಂದರ್ಭದಲ್ಲಿ ತಮ್ಮ ರಕ್ಷಣೆ ಕೇಳುವುದಕ್ಕೆ ಪ್ರಯತ್ನ ಮಾಡುತ್ತೇನೆ ಏತಕ್ಕೆ ಈ ಒಂದು ವಿಷಯ ಪ್ರಿವಿಲೇಜ್ ಕಮಿಟಿಗೆ ಹೋಗುತ್ತದೆ. ಪ್ರಿವಿಲೇಜ್ ಕಮಿಟಿಯವರು ಆ ಬಗ್ಗೆ ನಿರ್ಣಯ ತೆಗೆದುಕೊಳ್ಳುತ್ತಾರೆ. ಆದರೆ ತಾವು ಈ ಸದನದ ಸದಸ್ಯರಿಗೆ ರಕ್ಷಣೆ ಕೊಡಬೇಕಾಗುತ್ತದೆ. ಏತಕ್ಕೆಂದರೆ ಇವೊತ್ತು ಗರಡಿ ಸಂಘದ ಅಧ್ಯಕ್ಷರು ಹಲವಾರು ಸಂಸ್ಥೆಗಳನ್ನು ಅವರ ಕೈಯಲ್ಲಿ ಇಟ್ಟುಕೊಂಡಿದ್ದಾರೆ. ಅವರಲ್ಲಿ ಬೇಕಾದ ಸಾಧನ ಸಂಪತ್ತು ಇದೆ. ಅವರಿಗೆ ಎಲ್ಲಾ ರೀತಿಯ ಶಕ್ತಿಯೂ ಇದೆ. ಆದ್ದರಿಂದ ಈ ಮನೆಯಲ್ಲಿ ಕೆಲಸಮಾಡತಕ್ಕ ವಿರೋಧ ಪಕ್ಷದ ನಾಯಕರಿಗೆ ಹಾಗೂ ಪ್ರತಿಯೊಬ್ಬ ಸದಸ್ಯರಿಗೂ ಸರ್ಕಾರದವರು ರಕ್ಷಣೆ ಕೊಡಬೇಕು. ಆ ರಕ್ಷಣೆಗಾಗಿ ತಮ್ಮ ಮೇಲೆ ಇದೆ. ಆದ್ದರಿಂದ ಆ ಬಗ್ಗೆ ತಾವು ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಗರಡಿ ಸಂಘದ ಅಧ್ಯಕ್ಷರಿಗೆ ಅಧಿಕಾರ ಇದೆ. ಹಣ ಇದೆ. ಆದ ರಿಂದ ರೂಲ್ಸ್ ಪ್ರಕಾರ ನಮಗೆ ರಕ್ಷಣೆ ಕೊಡತಕ್ಕಂಥಾ ಕ್ರಮ ತೆಗೆದುಕೊಳ್ಳಬೇಕೆಂದು ನಾನು ತಮ್ಮನ್ನು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಸದಸ್ಯರಿಗೆ ರಕ್ಷಣೆ ಕೊಡಬೇಕಾದ್ದು ಸ್ಪೀಕರ್ ಅವರ ಕರ್ತವ್ಯ. ಆದ್ದರಿಂದ ನಾನು ಇದನ್ನು ಮುಖ್ಯ ಮಂತ್ರಿಗಳಿಗೆ ತಿಳಿಸುತ್ತೇನೆ.

Matter under Rule 312

re : **Press statement of the Chief Minister at Bijapur**

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ ನಿನ್ನೆ ಶನಿವಾರದ ದಿವಸ ಮಾನ್ಯ ಮುಖ್ಯ ಮಂತ್ರಿಗಳು ಬಿಜಾಪುರದ ಹೇಳಿಕೆಯ ಬಗ್ಗೆ...

ಅಧ್ಯಕ್ಷರು.—ಪೊನ್ನೆಯೇ ಅದೆರಾ ಮುಗಿಯಿತು.

ಶ್ರೀ ಕೆ.ಎಚ್, ಹನುಮೇಗೌಡ.—ಮುಗಿದಿಲ್ಲ.

ಅಧ್ಯಕ್ಷರು.—ಮಾನ್ಯ ಮುಖ್ಯ ಮಂತ್ರಿಗಳು ನನಗೆ ಕಾಗದ ಬರೆದಿದ್ದಾರೆ. ನನಗೆ ಕಾನ್ಸಿಲ್‌ನಲ್ಲಿ ಕೆಲಸ ಇದೆ. ಆದ್ದರಿಂದ ಈ ಸಭೆಗೆ ಬರುವುದಕ್ಕಾಗುವುದಿಲ್ಲ. ಕ್ಷಮಿಸಬೇಕು ಎಂದು ನನಗೆ ಕಾಗದ ಬರೆದಿದ್ದಾರೆ. ಶನಿವಾರ ಪೂರ್ತಿ ಕೆಲಸ ಆಗಿಲ್ಲ. ಕೆಲಸಮಾಡುವುದು ಬೇಕಾಗಿಲ್ಲ, ಮಾಡುವುದಿಲ್ಲ ಎಂದು ತಿಳಿಸಿಬಿಡಿ ಈ ಬಗ್ಗೆ. ಶ್ರೀಮಾನ್ ಕಾಗೋದು ತಿಮ್ಮಪ್ಪನವರು ಸ್ಪಷ್ಟವಾಗಿ ತಿಳಿಸಿದ್ದಾರೆ. ಈವಾರ ನಮಗೆ ಕೆಲಸಮಾಡಬೇಕು ಎಂಬ ಇರಾದೆ ಇರಲಿಲ್ಲ, ಆದರೆ ಸರ್ಕಾರದ

ಇರಾದೆಯ ಮೇಲೆ ನಾವು ಕುಳಿತುಕೊಂಡಿದ್ದೇವೆ ಎಂದು ಹೇಳಿದ್ದಾರೆ. ಆದ್ದರಿಂದ ತಮಗೆ ಕೆಲಸ ಮಾಡುವ ಇರಾದೆ ಇಲ್ಲದಿದ್ದರೆ ಅವನ್ನು ಇಲ್ಲಿ ತಿಳಿಸುವುದಕ್ಕೆ ತಮಗೆ ಇಷ್ಟವಿಲ್ಲದಿದ್ದರೆ ನನ್ನ ಛೇಂಬರಿಗೆ ಬಂದು ತಿಳಿಸಿ. ಈ ಸಭೆಯನ್ನು ಅಷ್ಟರ್ನ ಮಾಡುವುದಕ್ಕೆ ಏರ್ಪಾಟು ಮಾಡುತ್ತೇನೆ.

ಶ್ರೀ ಕೆ.ಎಚ್. ಹನುಮೇಗೌಡ.—ಮುಖ್ಯಮಂತ್ರಿಗಳು ಬಿಜಾಪುರದಲ್ಲಿ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ.

ಅಧ್ಯಕ್ಷರು.—ಮುಖ್ಯ ಮಂತ್ರಿಗಳು ಈ ಸಭೆಗೆ ಬರಲಿ. ಆ ಮೇಲೆ ಆ ವಿಷಯವನ್ನು ತಾವು ಇಲ್ಲಿ ಕೇಳಬಹುದು.

ಶ್ರೀ ಕೆ. ಎಚ್. ಹನುಮೇಗೌಡ.—ಕಾನ್ಸಿಲ್‌ನಲ್ಲಿ ಇದ್ದಾರೆ. ಹೇಳಿಕಳುಹಿಸಿದರೆ ಬರುತ್ತಾರೆ. ಇದು ಬಹಳ ಪ್ರಾಮುಖ್ಯವಾದ ವಿಷಯ.

ಅಧ್ಯಕ್ಷರು.—ಇದು ವಿಷ್ಯ ಪ್ರಾಮುಖ್ಯ ಎಂಬುದು ನನಗೆ ಗೊತ್ತಿದೆ.

ಶ್ರೀ ಎಚ್. ಡಿ. ದೇವೇಗೌಡ.—ನಾನು ಮುಖ್ಯ ಮಂತ್ರಿಗಳಿಗೆ ಒಂದು ಬಹಿರಂಗ ಪತ್ರವನ್ನು ಬರೆದಿದ್ದೇನೆ. ಅವನ್ನು ಸೋಮವಾರ ಈ ಸಭೆಯಲ್ಲಿ ಓದುತ್ತೇನೆ ಎಂದು ಒಂದು ಹೇಳಿಕೆಯನ್ನು ಕೊಟ್ಟಿದ್ದೆ. ಈಗ ಆ ಪತ್ರವನ್ನು ಓದುತ್ತೇನೆ.

ಅಧ್ಯಕ್ಷರು.—ಮುಖ್ಯ ಮಂತ್ರಿಗಳು ಬರಲಿ. ಅವರು ಬಂದ ಮೇಲೆ ಅದನ್ನು ಓದಿ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಮುಖ್ಯ ಮಂತ್ರಿಗಳು ಕೌನ್ಸಿಲ್‌ನಲ್ಲಿದ್ದಾರೆ. ಅವರಿಗೆ ಹೇಳಿ ಕಳುಹಿಸಿ ಅವರು ಬರುತ್ತಾರೆ. ಈಗ ಶ್ರೀ ಎಚ್.ಡಿ. ದೇವೇಗೌಡರಿಗೆ ಬಹಿರಂಗ ಪತ್ರವನ್ನು ಓದುವುದಕ್ಕೆ ಅವಕಾಶ ಕೊಡಿ.

ಅಧ್ಯಕ್ಷರು.—ಶನಿವಾರ ಪೂರ್ತಿ ಕಾಲ ಕಳೆದ್ದೀರಿ.

ಶ್ರೀ ಎಚ್ ಡಿ. ದೇವೇಗೌಡ.—ಶನಿವಾರ ಈ ಸಭೆಯಲ್ಲಿ ಕಾರ್ಯಕ್ರಮಗಳು ನಡೆಯುವಾಗ ಅಧ್ಯಕ್ಷ ಪೀಠದಲ್ಲಿ ಮಾನ್ಯ ಉಪಾಧ್ಯಕ್ಷರು ಇದ್ದರು. ಕೆಲವು ಅಹಿತಕರವಾದ ಘಟನೆಗಳು ನಡೆದವೆ

ಅಧ್ಯಕ್ಷರು.—ನಾನು ನನ್ನ ಛೇಂಬರಿನ ಒಳಗಡೆಯೇ ಇದ್ದೆ.

ಶ್ರೀ ಎಚ್. ಡಿ. ದೇವೇಗೌಡ.—ತಾವು ಶನಿವಾರ ಈ ಸಭೆಯ ಕಾರ್ಯಕ್ರಮಗಳನ್ನು ವೀಕ್ಷಿಸಿದ್ದರೆ ಸಂತೋಷ. ಅದಿವನ ಏನೊಂದು ಘಟನೆ ನಡೆಯುತ್ತು ಅದು ಸರಿಯೇ ? ತಪ್ಪೇ ಎಂದು ನಾನು ಅವನ್ನು ವಿಶ್ಲೇಷಣೆ ಮಾಡುವುದಕ್ಕೆ ಹೋಗುವುದಿಲ್ಲ. ಕೆಲವು ಪತ್ರಿಕೆಯಲ್ಲಿ ಏನು ವರದಿಯಾಗಿದೆ ಎಂದರೆ ವಿರೋಧ ಪಕ್ಷದವರು ನನ್ನನ್ನು ಛೇಂಬರಾಫೋ ಮಾಡಿದರು ಎಂದು ಬರೆದಿದೆ. ಅವನು ನನ್ನ ಅವಿಶ್ವಾಸ ಸೂಚಿಸಿ ನನ್ನ ಸವಲತ್ತನ್ನು ಕಿತ್ತುಕೊಳ್ಳುವ ಹಾಗಿಲ್ಲ ಆದರೆ ಒಂದರಡು ಪತ್ರಿಕೆಗಳಲ್ಲಿ ವ್ಯಕ್ತವಾಗಿರುವ ರೀತಿಯಲ್ಲಿ ವಿರೋಧ ಪಕ್ಷದವರು ನನ್ನಲ್ಲಿ ಅವಿಶ್ವಾಸವನ್ನು ತೋರಿಸಕ್ಕಂಥಾ ಪ್ರಯತ್ನ ನಡೆದಿದೆ ಎನ್ನುವುದನ್ನು ಪ್ರಕಟ ಮಾಡಿದೆ. ಒಂದೆರಡು ಪತ್ರಿಕೆಗಳಲ್ಲಿ ಈ ರೀತಿ ಬಂದಿದೆ. ಇದನ್ನು ನಾನು ಸ್ವಲ್ಪ ಸ್ಪಷ್ಟೀಕರಣ ಮಾಡುವುದಕ್ಕೆ ಇಷ್ಟಪಡುತ್ತೇನೆ.

ಮತ್ತೊಂದು ವಿಷಯವೇನೆಂದರೆ ನಾನು ಮಾನ್ಯ ಮುಖ್ಯ ಮಂತ್ರಿಗಳಿಗೆ ಬರೆದಿರುವಕ್ಕೆ ಬಹಿರಂಗ ಪತ್ರವನ್ನು ಈ ಸಭೆಯಲ್ಲಿ ಓದಬೇಕು ಎಂದು ನನ್ನ ಮಿತ್ರರು ಕೇಳಿದ್ದಾರೆ. ಆದ್ದರಿಂದ ನಾನು ಅದನ್ನು ಈ ಸಭೆಯಲ್ಲಿ ಓದುವುದಕ್ಕೆ ತಮ್ಮ ಅಪ್ಪಣೆಯನ್ನು ಕೇಳುತ್ತೇನೆ. ಏತಕ್ಕೆಂದರೆ ಇದು ಬಹಳ ಗಹನವಾದ ವಿಷಯ. ಈ ಪತ್ರವನ್ನು ಓದಿದರೆ ನನ್ನ ಪತ್ರ ಏನು ಎಂಬುದು ದೇಶಕ್ಕೆ ತಿಳಿಯುತ್ತದೆ.

ಅಧ್ಯಕ್ಷರು.—ನಾನು ಈಗಾಗಲೇ ಹೇಳಿದ್ದೇನೆ ಮುಖ್ಯಮಂತ್ರಿಗಳು ಈ ಸಭೆಗೆ ಬರಲಿ ಎಂದು.

ಶ್ರೀ ಎಚ್.ಡಿ. ದೇವೇಗೌಡ.—ನಾನು ಆ ಬಹಿರಂಗ ಪತ್ರವನ್ನು ಈ ಸಭೆಯಲ್ಲಿ ಓದುತ್ತೇನೆ ಎಂದು ಕಮಿಟ್ ಮಾಡಿಕೊಂಡಿದ್ದೇನೆ. ಆದ್ದರಿಂದ ನಾನು ಅದನ್ನು ಈಗ ಓದುತ್ತೇನೆ.

ಇನ್ನೊಂದು ವಿಷಯವೇನೆಂದರೆ ಒಂದು ಸಂದರ್ಭದಲ್ಲಿ ದೇವೇಗೌಡರು ಹೇಳಿಕೆಯನ್ನು ಕೊಟ್ಟು ಕೈಬಿಡುತ್ತಾರೆ ಎಂದು ಅನೇಕ ತೆಗಳು ಬರುತ್ತಿವೆ. ಸ್ವಲ್ಪ ದಿವಸಗಳ ಹಿಂದೆ ಪ್ರಜಾವಾಣಿ ಪತ್ರಿಕೆಯ ವಾಚಕರ ವಾಣಿಯಲ್ಲಿ ಬರೆದಿದ್ದಾರೆ, ದೇವೇಗೌಡರು ಚಾಲೆಂಜ್ ಕೊಟ್ಟು ಕೈಬಿಡುತ್ತಾರೆ ಎಂದು. ನಾನು ಈ ಸಂದರ್ಭದಲ್ಲಿ ಒಂದು ಮಾತನ್ನು ಮಾತ್ರ ಈ ದೇಶದ ಜನತೆಗೆ ತಿಳಿಸುತ್ತೇನೆ. ವಿರೋಧ ಪಕ್ಷದ ನಾಯಕರು ಚಾಲೆಂಜ್ ಕೊಟ್ಟಾಗ ಅದನ್ನು ಸ್ವೀಕಾರ ಮಾಡತಕ್ಕೆ ಜವಾಬ್ದಾರಿ ಸರ್ಕಾರಕ್ಕೆ ಸೇರಿದ್ದು ನಾವು ಯಾವುದೇ ಚಾಲೆಂಜ್ ಕೊಟ್ಟರೂ ಅವನ್ನು ಸ್ವೀಕಾರ ಮಾಡಿ ವಿಚಾರಣೆ

(ಶ್ರೀ ಎಚ್. ಡಿ. ದೇವೇಗೌಡ)

ಮಾಡತಕ್ಕ ಹೊಣೆಗಾರಿಕೆ ಸರ್ಕಾರದ ಮೇಲೆ ಬಿದ್ದಿದೆ. ಆ ಚಾಲೆಂಜನ್ನು ಒಪ್ಪಿಕೊಂಡು ಪರಿಣಾಮವನ್ನು ಎದುರಿಸುವುದು ಸರಕಾರಕ್ಕೆ ಗೌರವ ತರುವ ವಿಷಯ. ವಿಚಾರಣೆ ಮಾಡುವುದಕ್ಕೆ ಸರ್ಕಾರ ತಯಾರಿಲ್ಲದಿದ್ದರೆ ಏನು ಮಾಡುವುದಕ್ಕಾಗುತ್ತದೆ? ನಾನು ನನ್ನ ಚಾಲೆಂಜನ್ನು ಸರ್ಕಾರಕ್ಕೆ ಕೊಟ್ಟಿದ್ದೇನೆ. ಅವರು ಅದನ್ನು ಒಪ್ಪಿ ಕೊಂಡು ವಿಚಾರಣೆ ಮಾಡಬೇಕು. ದೇವೇಗೌಡರ ಯೋಗ್ಯತೆ ಇದು ಎಂದು ದೇಶದ ಜನತೆಗೆ ಹೇಳಲು ಸಿದ್ಧರಾಗಬೇಕು. ಆದರ ಹೊಣೆಗಾರಿಕೆ ಸರ್ಕಾರದ ಮೇಲೆ ಇದೆ. ನಾನು ತಿಳಿಸಿದ ಹಾಗೆ ನಾನು ಅದಕ್ಕೆ ಬದ್ಧನಾಗಿದ್ದೇನೆ. It is upto the Government to take that challenge and see that the atmosphere created on a count of the statement. ಇದನ್ನು ಮಾಡತಕ್ಕದ್ದು ಮುಖ್ಯಮಂತ್ರಿಯವರ ಮೇಲೆ ಬಿದ್ದಿರತಕ್ಕ ಜವಾಬ್ದಾರಿ; ಸರ್ಕಾರದ ಮೇಲೆ ಬಿದ್ದಿರುವ ಜವಾಬ್ದಾರಿ. ಆ ಕೆಲಸವನ್ನು ಸರ್ಕಾರ ಮಾಡಬೇಕು ಎಂದು ನಾನು ತಿಳಿಸುತ್ತೇನೆ.

Sri S. M. KRISHNA.—This directly concerns the Chief Minister. He has written to the Chief Minister and it has been mentioned more than once. We do not know what the contents are. The letter is not with us. Therefore you were perfectly right in saying that this matter can be taken up when the Chief Minister is present here.

ಶ್ರೀ ಎಚ್. ಡಿ. ದೇವೇಗೌಡ.—ಮುಖ್ಯ ಮಂತ್ರಿಗಳು ನನ್ನ ಕಾಗದವನ್ನು ರಿಸೀವ್ ಮಾಡಿದ್ದಕ್ಕೆ ಅವರಿಂದ ಆಕ್ನಾಲೆಡ್ಜ್‌ಮೆಂಟ್ ಬಂದಿದೆ. ಅವರ ಪರ್ಸನಲ್ ಸೆಕ್ರೆಟರಿ ರುಜು ಹಾಕಿದ್ದಾರೆ.

MADAM SPEAKER.—Nobody disputes the fact of your writing to the Chief Minister.

Sri H. D. DEVE GOWDA.—I am only asking permission of the Chair not for the benifit of the Chief Minister. Chief Minister has already got it in his hands. It is up to him to take that challenge. It is not for me. ದೇಶದ ಜನತೆಯಲ್ಲಿ ವಿರೋಧ ಪಕ್ಷದ ನಾಯಕರು ಕೊಟ್ಟಂತಹ ಚಾಲೆಂಜಿನಿಂದ ಹಿಮ್ಮುಖರಾಗುತ್ತಿದ್ದಾರೆ, ನುಣುಚಿಕೊಳ್ಳುತ್ತಿದ್ದಾರೆ ಎನ್ನುವ ಭಾವನೆ ಬೆಳೆದಿದೆ. ದೇವೇಗೌಡರು ಸುಮ್ಮನೆ ಕುಳಿತುಕೊಂಡಿದ್ದಾರೆ. ಅವರು ಕೊಟ್ಟಂತ ಚಾಲೆಂಜ್‌ನಿಂದ ನುಣುಚಿಕೊಳ್ಳುವುದಕ್ಕೆ ಪ್ರಯತ್ನಮಾಡುತ್ತಿದ್ದಾರೆ ಎನ್ನುವ ವಾತಾವರಣ ಬೆಳೆದಿದೆ. ಆ ವಾತಾವರಣವನ್ನು ಇವೊತ್ತು ಬಗೆಹರಿಸತಕ್ಕಂಥದ್ದು, ನಿವಾರಣೆ ಮಾಡತಕ್ಕಂಥಾದ್ದು ನನ್ನ ಹೊಣೆಗಾರಿಕೆ. ತಮ್ಮನ್ನು ಹೇರಾಪೋ ಮಾಡಿದರೂ ಸುಮ್ಮನಿದ್ದರು ಎಂದು ಜನ ತಿಳಿದುಕೊಳ್ಳಬಾರದು. ಈ ಕೆಲಸ ತಮ್ಮ ಮುಖೇನ ಮಾಡಬೇಕಾಗುತ್ತದೆ. ನಾನು ಮುಖ್ಯ ಮಂತ್ರಿಗಳಿಗೆ ಬರೆದಿರುವ ಪತ್ರ ನನ್ನ ಪೆತ್ತಿರ ಇದೆ. ನನ್ನ ಸ್ಟ್ರೈಂಡ್ ಏನೆಂದರೆ, ದೇವೇಗೌಡರಿಗೆ ಹೇರಾಪೋ ಮಾಡಿದವರು ಎಂದರೆ ದೇಶದ ಜನತೆಯಲ್ಲಿ ಬೇರೇ ತರಹ ಭಾವನೆ ಬರುತ್ತದೆ. ಅದನ್ನು ವಿಶದೀಕರಣ ಮಾಡುವುದಕ್ಕೋಸ್ಕರ ಸಭೆಯ ಮುಂದೆ ಈ ಪತ್ರವನ್ನು ಇಡುವುದಕ್ಕೆ ತಾವು ಅನುಮತಿ ಕೊಡದೇ ಹೋದರೆ, ದೇಶದ ಜನತೆಯಲ್ಲಿ ತಪ್ಪು ಭಾವನೆ ಬರುವುದಕ್ಕೆ ಅವಕಾಶವಾಗುತ್ತದೆ.

ಅಧ್ಯಕ್ಷರು.—ಪತ್ರ ಓದುವುದಕ್ಕೆ ನನ್ನ ಅಭ್ಯಂತರವಿಲ್ಲ. ಮುಖ್ಯಮಂತ್ರಿಗಳು ಇರುವಾಗ ಓದಿದ್ದರೆ ಚೆನ್ನಾಗಿತ್ತು.

Sri H. D. DEVE GOWDA.—It is for the Hon. Chief Minister to take that challenge. It is not for me. I am reading the contents of the letter for the benefit of the House and not for the Chief Minister. The Chief Minister is already having letter with him. The contents of that letter are as follows :—

H. D. Devegowda, MLA,
Leader of Opposition.

Bangalore,
Dated: 9. 8. 74.

Open letter to Shri D. Devaraj Urs, Hon. Chief Minister.

My dear Chief Minister,

I have carefully gone through your speech at the Scheduled Castes and Backward Classes Conference held at Bijapur on 5-8-1974 wherein you I have said that if anyone proves that you as Chief Minister had yielded to under pressures of cas e, n potism and money in the discharge of your duties you will step down from the high office you hold at present. This has been reported in the columns of a local daily dated 7th August 1974. I must compliment you on your bold statement and hope that you will stand by it.

I accept your challenge, and request you to appoint a Judicial Commission forthwith to conduct a thorough enquiry into the charges of corruption, nepotism and favouritism. I mean a full-fledged Judicial Commission presided over by the Chief Justice of the State High Court or by a sitting Judge of the Supreme Court. If such a Judicial forum is set up, I am prepared to place before it all the materials available with me to prove how your administration is being carried on against all moral scruples. If what I place before such a judicial body is proved false I am prepard not only to resign my membership of the Assembly but will efface myself from public life. I have with me any number of instances wherein your administration has deviated from the best principles of honesty and integrity. There is rampant corruption in every sphere of your administration. I could place before the Judicial Commission instances of favouritism, nepotism and other ugly forms. When all these are staring in your adminisiration, it only amuses me that you should make such a statement.

As I said I accept this challenge and am ready to prove my allegation before a High Judicial Authority. Please act now in accordance with your speech.

With regards,
Yours sincerely,
(Sd)-H. D. Devegowda.

I am going to stand by this challenge to-day, tomorrow, or on any date. ಇಪ್ಪನ್ನು ಹೇಳಿ ಮುಖ್ಯಮಂತ್ರಿಗಳಿಗೆ ಬಿಡುತ್ತೇನೆ. ಒಹಿಶಃ ಒಳ್ಳೆಯ ನತ್ಸಂಪ್ರದಾಯವನ್ನು ಆಡಳಿತದಲ್ಲಿ ಹಾಕಿಕೊಂಡು ಹೋಗಬೇಕು ಎನ್ನುವುದು ಇದ್ದರೆ ಈ ಚಾರೆಂಜನ್ನು ಸ್ವೀಕಾರ ಮಾಡಿ. ಜುಡಿಶಿಯರ್ ಕಮಿಷನ್ ನೇಮಕಮಾಡಿ ಅಗ್ನಿಪರೀಕ್ಷೆಯಲ್ಲಿ ಮುಖ್ಯಮಂತ್ರಿಗಳು ತೇರ್ಗಡೆಯಾಗಬೇಕು, ಇಲ್ಲ ನಾನು ತೇರ್ಗಡೆಯಾಗಬೇಕು. ದೇಶದ ಜನತೆಯಲ್ಲಿ ಆಡಳಿತದಲ್ಲಿ ಇರತಕ್ಕ ವಾತಾವರಣ ಕೆಟ್ಟಿದೆ, ಕಳಂಕದಿಂದ ಕೂಡಿದೆ ಎನ್ನುವ ಭಾವನೆ ಏನು ಬಂದಿದೆ, ಅದು ನಿವಾರಣೆಯಾಗಬೇಕಾದರೆ ಅಗ್ನಿಪರೀಕ್ಷೆಯಲ್ಲಿ ತೇರ್ಗಡೆಯಾಗಬೇಕು. ಉತ್ತೀರ್ಣರಾಗಬೇ ಹೋದರೆ ಕರ್ನಾಟಕದ ರಾಜಕೀಯ ಇತಿಹಾನದಲ್ಲಿ ಇದನ್ನು ಕಪ್ಪು ಅಕ್ಷರಗಳಿಂದ ಬರೆಯುತಕ್ಕಂಥಾದ್ದಿದೆ. ಅದಕ್ಕೆ ಮುಖ್ಯ ಮಂತ್ರಿಗಳು ಅವಕಾಶ ಕೊಟು ಕೊಳ್ಳುವುದಲ್ಲಿ ಎಂದು ಇನ್ನೂ ನಂಬಿದ್ದೇನೆ. ದಯಮಾಡಿ ಅವರು ಅಗ್ನಿಪರೀಕ್ಷೆಯಲ್ಲಿ ತೇರ್ಗಡೆಯಾಗಲಿಕ್ಕೋನ್ಸ್ಕರ, ಅವರ ವ್ಯಕ್ತಿತ್ವವನ್ನು, ಗೌರವನ್ನು ಉಳಿಸುವುದಕ್ಕೋನ್ಸ್ಕರ, ಈ ಚಾರೆಂಜನ್ನು ಸ್ವೀಕಾರಮಾಡಬೇಕು ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಶನಿವಾರದ ದಿವಸ ಈ ಸದನದಲ್ಲಿ ಈ ವಿಷಯ ಪ್ರಸ್ತಾಪವಾಗಿದೆಯೆನ್ನುವುದು ಗೊತ್ತಿದೆ.

ಅಧ್ಯಕ್ಷರು.—ನಾನು ಆಗಿನಿಂದ ಕಾದು ನೋಡುತ್ತಾ ಇದ್ದೇನೆ, ತಮಗೆ ಸದನದಲ್ಲಿ ಕೆಲಸ ಮಾಡುವುದು ಇಷ್ಟವಿಲ್ಲ ಎಂದರೆ ಹೇಳಿ, ಮುಗಿಸೋಣ.

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೇ ಕ್ಷಮಿಸಬೇಕು. ತಾವು...

ಅಧ್ಯಕ್ಷರು.—ಶನಿವಾರ ಈ ವಿಚಾರ ಪ್ರಸ್ತಾಪವಾಗಿದೆ. ಅದನ್ನು ಪುನಃ ಹೇಳಿದ್ದೇ ಹೇಳುವುದಾಗಿದ್ದರೆ ಇನ್ನು ಅಡ್ಜರ್ನ್ ಮಾಡುವುದೊಂದೇ ಬಾಕಿ ಉಳಿದಿರುವುದು.

ಶ್ರೀ ಎಚ್. ಡಿ. ದೇವೇಗೌಡ.—ಈ ಸಭೆಯ ಕಾಲವನ್ನು ಕಳೆಯುವುದಕ್ಕೆ ಪ್ರಾಮಾಣಿಕವಾಗಿ ಯಾರಿಗೂ ಇಷ್ಟವಿಲ್ಲ. ಇವತ್ತು ಈ ಒಂದು ವಿಷಯ ಏನಿದೆ ಅದು ಪ್ರಾಮಾಣಿಕವಾಗಿ ಗಹನವಾದ ವಿಷಯ, ಸಾಮಾನ್ಯವಾದ ವಿಷಯವಲ್ಲ. ವಿರೋಧ ಪಕ್ಷದ ನಾಯಕರು ಮತ್ತು ಸದಸ್ಯರಲ್ಲಿ ಏನು ಒಂದು ಭಾವನೆ ಬಂದಿದೆ, ಆ ಭಾವನೆಗೆ ಪರಿಹಾರ ಸೂಚಿಸಿಕೊಡಬೇಕಾದರೆ, ಮುಖ್ಯ ಮಂತ್ರಿಗಳು ಹೇಳಿಕೆ ಕೊಡಬೇಕು. ಏಕೆಂದರೆ, ಬಿಸ್‌ನೆಸ್ ಅಡ್ವೈಸರಿ ಕಮಿಟಿಯಲ್ಲಿ ತೀರ್ಮಾನ ಆದ ಪ್ರಕಾರ ಹೆಲ್ತ್ ಯೂನಿವರ್ಸಿಟಿ ಬಿಲ್ ಆಗಲಿ, ಅಗ್ರಿಕಲ್ಚರಲ್ ಯೂನಿವರ್ಸಿಟೀಸ್ ಬಿಲ್ಲಿಗಾಗಲಿ ಅಥವಾ ಯಾವುದೇ ಯೂನಿವರ್ಸಿಟಿ ಬಿಲ್‌ಗಾಗಲೀ ನಾವು ಸರ್ಕಾರಕ್ಕೆ ಸಹಕಾರ ಕೊಡಲಿಕ್ಕೆ ತಯಾರಾಗಿದ್ದೇವೆ. ಕರ್ನಾಟಕ ಇತಿಹಾಸದಲ್ಲಿ, 26 ವರ್ಷಗಳ ಇತಿಹಾಸದಲ್ಲಿ ಇಂತಹ ವಾತಾವರಣ ಉಂಟಾಗಿರತಕ್ಕದ್ದು ಇದೇ ಪ್ರಥಮ. ಮುಖ್ಯಮಂತ್ರಿಗಳು ಅಗ್ನಿಪರೀಕ್ಷೆಗೆ ಸಿದ್ಧರಿದ್ದಾರೆ ಎಂದು ಹೇಳಿರುವುದೂ ಕರ್ನಾಟಕದ ಇತಿಹಾಸದಲ್ಲಿ ಪ್ರಥಮ ಎಂದು ಕಂಡಿದೆ. ಈ ವಾತಾವರಣಕ್ಕೆ ಏನಾದರೂ ಒಂದು ಅಂತಿಮ ನಿರ್ಣಯ ಆಗಬೇಕು. ಆಗನ್ನೇ ಹೊರತು ನನಗೆ ಇಲ್ಲಿ ಕುಳಿತು ಕಲಾಪ ಮಾಡುವುದಕ್ಕೆ ಸಮಾಧಾನವಾಗುವುದಿಲ್ಲ. ನಾನು ಕೈಜೋಡಿಸಿ ಕೇಳಿಕೊಳ್ಳುತ್ತೇನೆ, ನಾವು ಇಲ್ಲಿ ಬಂದಿರುವುದು ಕಾಲಹರಣ ಮಾಡಲಿಕ್ಕೆ ಮತ್ತು ಸಭೆಯ ಕಾರ್ಯಕಲಾಪಗಳನ್ನು ತಡಗಟ್ಟಿಲಿಕ್ಕೆ ಎಂದು ಭಾವನೆ ಮಾಡಿಕೊಳ್ಳಬೇಡಿ. ಇದರ ಬಗ್ಗೆ ಮುಖ್ಯಮಂತ್ರಿಗಳು ಹೇಳಿಕೆ ಕೊಟ್ಟರೆ ವಾತಾವರಣ ತಿಳಿಯಾಗಬಹುದು ಎಂದು ನಾನು ತಿಳಿದುಕೊಂಡಿದ್ದೇನೆ.

ಅಧ್ಯಕ್ಷರು.—ಚೀಫ್ ಮಿನಿಸ್ಟರ್ ಈಗ ಬರುವುದಕ್ಕೆ ಆಗುತ್ತಾ ಇಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ನನಗೆ ಗೊತ್ತಿದೆ, ಮೇಲ್ಮನೆಯಲ್ಲಿ ಕೊಶ್ಚನ್ ಅವರ್ ಮುಗಿದಿದೆ.

ಅಧ್ಯಕ್ಷರು.—ಆಗಲೇ ನೀವು ಲೆಟರನ್ನು ನಾನು ಓದುತ್ತೇನೆ, ಮುಖ್ಯಮಂತ್ರಿಗಳು ಮಾಪಾಗ ಬೇಕಾದರೂ ಒಂದು ಸ್ಟೇಟ್‌ಮೆಂಟ್ ಕೊಡಲಿ ಎಂದು ಹೇಳಿದಿರಿ. ಈಗ ಮುಖ್ಯಮಂತ್ರಿಗಳು ಸ್ಟೇಟ್‌ಮೆಂಟ್ ಮಾಡಬೇಕು ಎಂದು ಹೇಳುತ್ತಿದ್ದೀರಿ. ಹೀಗಾದರೆ ಸಭೆ ನಡೆಸುವುದಕ್ಕೆ ನನಗೂ ಸಾಧ್ಯವಿಲ್ಲ, ನಿಮಗೂ ಸಾಧ್ಯವಿಲ್ಲ.

ಶ್ರೀ ಎಚ್ ಡಿ. ದೇವೇಗೌಡ.—ಸದನದ ಬೆನಿಫಿಟ್‌ಗೆ ತೀರ್ಮಾನವೇ ನಾವು ಹಿಡಿದಿದ್ದು.

ಅಧ್ಯಕ್ಷರು.—ಮುಂದಿನ ಕಾರ್ಯಕಲಾಪ ಮಾಡಬೇಕೇ ಬೇಡವೇ ?

ಶ್ರೀ ಕೋಣಂದೂರು ಲಿಂಗಪ್ಪ.—ದೇಶದ ಜನ ನಮ್ಮನ್ನು ನೋಡುತ್ತಿದ್ದಾರೆ.

ಅಧ್ಯಕ್ಷರು.—ದೇಶದ ಜನ ನಿಮ್ಮನ್ನು ಒಬ್ಬರನ್ನೇ ನೋಡುತ್ತಿಲ್ಲ. ನನಗೂ ಸ್ವಲ್ಪ ಬುದ್ಧಿ ಇದೆ ಎಂದು ಅನ್ನಿಸಿಕೊಳ್ಳಬೇಕಾದರೆ ನಾವು ಹೀಗೆ ಮಾಡುವುದು ಸರಿಯಲ್ಲ, ಅದಕ್ಕೆ ಬೇರೆ ದಾರಿ ಇದೆ.

ಶ್ರೀ ಎಚ್. ಡಿ. ದೇವೇಗೌಡ.—ತಾವು ಮನಸ್ಸನ್ನು ಸ್ವಲ್ಪ ಕೆರಳಿಸಿಕೊಂಡಹಾಗೆ ಕಾಣುತ್ತದೆ. ದೇಶದ ಜನ ಇವರು ಸತ್ಸಂಪ್ರದಾಯವನ್ನು ಹಾಕುತ್ತಾರೆ ಎಂದು ನಿರೀಕ್ಷಣೆ ಮಾಡುತ್ತಿದ್ದಾರೆ. ಅದಕ್ಕೆ ತಕ್ಕಮಾರ್ಗ ಯೋಗ್ಯವಾದುದ್ದು, ಇದಕ್ಕಿಂತ ಗಹನವಾದ್ದು ಬೇರೆ ಯಾವುದೂ ಇಲ್ಲ. ರಾಷ್ಟ್ರದಲ್ಲಿ ಇಂತಹ ಒಂದು ವಾತಾವರಣ ನಿರ್ಮಾಣವಾಗಿರುವುದು ಇದೇ ಪ್ರಥಮ. ಇದಕ್ಕಿಂತ ಉತ್ತಮವಾದದ್ದನ್ನು ಏನು ನಿರೀಕ್ಷಣೆ ಮಾಡಬಹುದು ? ಇವತ್ತು ಜನತೆಗೆ ಯಾವುದೋ ಯೂನಿವರ್ಸಿಟಿ ಬಿಲ್ ಪಾಸ್‌ಮಾಡಿದರೆ ಸಂತೋಷವಾಗುವುದಿಲ್ಲ. ರಾಜಕೀಯದಲ್ಲಿ ಇಂಥ ಒಂದು ತಾತ್ಕಾಲಿಕ ಉಂಟಾದಾಗ, ಅದನ್ನು ತಿಳಿ ಮಾಡಲಿಕ್ಕೆ ಕರ್ನಾಟಕ ವಿಧಾನ ಸಭೆ ಇಂಥ ಒಂದು ನಿರ್ಣಯ ತೆಗೆದುಕೊಂಡಿತು ಎಂದು ಹೇಳಿದರೆ ಅದು ಅಹಂದಾರ್ಢ್ಯವಾಗಿ ಉಳಿಯುತ್ತದೆ.

ಶ್ರೀ ಎಚ್. ಸಿದ್ದವೀರಪ್ಪ.—ಮಾನ್ಯ ಮುಖ್ಯಮಂತ್ರಿಗಳು ಬರುತ್ತಾರೆ. ಬಂದಾಗ ನೀವು ಮತ್ತೆ ಪ್ರಸ್ತಾಪ ಮಾಡೀ ಮಾಡುತ್ತೀರಿ ಅದಕ್ಕೊಸ್ಕರ ಈಗ ಅತಕ್ಕೆ ಸುಮ್ಮನೆ ಚರ್ಚೆ ಮಾಡಬೇಕೆಂದು ತಮ್ಮ ಮೂಲಕ ಕೇಳುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ಹಿಂದೆ ಶ್ರೀ ಜಿ. ಟಿ. ಶಂಕರ್‌ರಾವ್‌ರವರು ಈ ಸಭೆಯಲ್ಲಿ "ಪ" ಎನ್ನುವ ಶಬ್ದವನ್ನು ಪ್ರಯೋಗ ಮಾಡಿದರು ಎಂದು ಹೇಳಿ, ನೀವು ಈ ಸಭೆಯಲ್ಲಿ ಒಂದೂವರೆ ದಿನಗಳ ಕಾಲ ಯಾವ ಕಾರ್ಯಕ್ರಮಗಳನ್ನು ನಡೆಸುವುದಕ್ಕೆ ಅವಕಾಶ ಕೊಡದೇ ಆ ಶಬ್ದವನ್ನು ವಾಪಸ್ ತೆಗೆಸಿದ್ದೀರಿ. ಅಂಥದ್ದರಲ್ಲಿ ನೀವು ನಮಗೆ ಉಪದೇಶ ಮಾಡುವುದಕ್ಕೆ ಹೊರಟಿದ್ದೀರಿ.

Sri K. PUTTASWAMY.—So much of water has flown under the bridge since then.

ಶ್ರೀ ಎಚ್. ಡಿ. ದೇವೇಗೌಡ.—ನಾವು ಈ ವಿಷಯವನ್ನು ಶನಿವಾರದ ದಿವಸ ಚರ್ಚೆಮಾಡಿ, ಒಂದು ದಿನ ಕಾಲಹರಣ ಮಾಡಿ, ನಾನ್ ಆಫೀಷಿಯಲ್ ಡೇಯನ್ನು ಕಳೆದಿದ್ದರೂ ಕೂಡ ರಾಜ್ಯದ ಇತಿಹಾಸದಲ್ಲಿ ನೀವು ಒಂದು ಇತಿಹಾಸವನ್ನು ನಿರ್ಮಾಣ ಮಾಡುತ್ತಿದ್ದೀರಿ. ನೀವು ಈಗಿನ ಸ್ಥಾನದಲ್ಲಿ ಕುಳಿತಿ ತಕ್ಕಂಥ ನಿರ್ಧಾರದಲ್ಲಿ ಇಂಥ ಒಂದು ಹೊಸ ಇತಿಹಾಸವನ್ನು ನಿರ್ಮಾಣಮಾಡುತ್ತಿದ್ದೀರಿ. ಅದಕ್ಕೆ ಅವಕಾಶ ಕೊಡಬಾರದೆಂದು ಹೇಳುತ್ತೇನೆ.

ಅಧ್ಯಕ್ಷರೇ.—ನೀವು ನನ್ನನ್ನು ಇಕ್ಕಟ್ಟಿಗೆ ಸಿಕ್ಕಿಸುವುದಕ್ಕೆ ಆಗುವುದಿಲ್ಲ. ನಾನು ಹೇಳುತ್ತಿದ್ದುದು ಏನೆಂದರೆ ಚೀಫ್ ಮಿನಿಸ್ಟರ್‌ರವರು ಈ ಹೌಸ್‌ನಲ್ಲಿ ಇಲ್ಲ. ಈಗ ಸಧ್ಯಕ್ಕೆ ಬರುವುದಕ್ಕೆ ಆಗುವುದಿಲ್ಲ ಪೂರ್ತಿಯಾಗಿ ಕಾರ್ಯಮಗ್ನನಾಗಿದ್ದೇನೆಂದು ಪತ್ರ ಬರೆದಿದ್ದಾರೆ. ಹೀಗಿರುವಾಗ ಮುಖ್ಯಮಂತ್ರಿಗಳನ್ನು ಈ ವಿಚಾರದಲ್ಲಿ ಈಗಲೇ ಸ್ಟೇಟ್‌ಮೆಂಟ್ ಮಾಡಿ ಎಂದು ಹೇಳುವುದಕ್ಕೆ ಆಗುವುದಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಮುಖ್ಯಮಂತ್ರಿಗಳು ವಿಧಾನ ಪರಿಷತ್ತಿನಲ್ಲಿದ್ದಾರೆ. ಅಲ್ಲಿಯೂ ಕೂಡ ಇಂದಿರಾ ಬ್ರಿಗೇಡ್ ಬಗ್ಗೆ ಪ್ರಿವಿಲೇಜ್ ಮೋಷನ್ ನಡೆಯುತ್ತಿದೆ. ಮಾನ್ಯ ಎಸ್. ಎಂ. ಕೃಷ್ಣರವರು ಇಲ್ಲಿ ಹೇಳಿಕೆ ಕೊಟ್ಟ ಹಾಗೆ ಅಲ್ಲಿಯೂ ಅವರು ಹೇಳಿಕೆ ಕೊಡಬಹುದು. ಅಲ್ಲಿ ಮುಖ್ಯಮಂತ್ರಿಗಳು ಇರಬೇಕಾದ ಅವಶ್ಯಕತೆ ಇಲ್ಲ. ಅಲ್ಲಿ ಅಂಥ ಬೇರೆ ಗಹನವಾದ ವಿಚಾರ ಚರ್ಚೆಯಾಗುತ್ತಾ ಇಲ್ಲ. ಈ ಸಭೆಗೆ ಅವರನ್ನು ಕರೆಸಬೇಕು.

MADAM SPEAKER.—He has written to me as follows :—

"Madam Speaker, today I am fully engaged in the Council from 2-00 P. M. for the whole day. Therefore, I am not in a position to attend the Assembly."

ಹೀಗೆ ಅವರು ಕಾಗದ ಬರೆದಿದ್ದಾರೆ. ಈ ರೀತಿ ಅವರು ಕಾಗದ ಬರೆದಿರುವುದರಿಂದ ನನಗೆ ಈ ಕಾಗದ ಮುಖ್ಯವೇ ಹೊರತು, ಬೇರೆ ಯಾವುದೂ ಮುಖ್ಯವಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಇವತ್ತು ನಿಮಗೆ ಒಂದು ಮಾತು ಹೇಳುತ್ತೇನೆ. ನಮಗಿಂತ ನಿಮಗೇ ಹೆಚ್ಚಿನ ಅನುಭವವಾಗಿದೆ. ಇವತ್ತು ನೀವು ಈ ಎತ್ತರದ ಸ್ಥಾನದಲ್ಲಿ ಕುಳಿತಿದ್ದೀರಿ, ವಿಧಾನ ಪರಿಷತ್ತಿನಲ್ಲಿ ಬಿಟರ್ ಮೆಂಟ್ ರೆವಿ ಬಗ್ಗೆ ಚರ್ಚೆಯಾಗುತ್ತಿರುವಾಗ ಮಾನ್ಯ ಮುಖ್ಯಮಂತ್ರಿಗಳು ಇರಬೇಕಾದಂಥ ಮುಖ್ಯ ನಿರ್ಣಯ. ಆದ ಮಾನ್ಯ ಸದಸ್ಯರುಗಳು ಚರ್ಚೆಮಾಡುವ ಥ ಕಾಲದಲ್ಲಿ ಕೆಲವು ಪಾಯಿಂಟ್ಸ್‌ಗಳನ್ನು ಬರೆದುಕೊಳ್ಳಬೇಕಾಗುತ್ತದೆ. ಅದನ್ನು ಬೇರೆ ಮಂತ್ರಿಗಳು ಬಂದು ಕೊಳ್ಳುತ್ತಾರೆ ಆಗ ಮುಖ್ಯಮಂತ್ರಿಗಳೇ ಎಲ್ಲ ಇರಬೇಕಾದ ಅವಶ್ಯಕತೆ ಇಲ್ಲ. ಆದ ದರಿಂದ ಮಾನ್ಯ ಮುಖ್ಯಮಂತ್ರಿಗಳನ್ನು ನೀವು ಇಲ್ಲಿಗೆ ಕರೆಸಿ ಒಂದು ಹೇಳಿಕೆಯನ್ನು ಕೊಡಿಸುವುದಕ್ಕೆ ಪ್ರಯತ್ನ ಮಾಡಬೇಕು. ಮೆಸ್ಸ್ ಬಂಗಾರಪ್ಪನವರ ಬರ್ತಡೇ ಪಾರ್ಟಿಯವರ ಮಂತ್ರಿಮಂಡಲವನ್ನು ಸ್ವೀಕರಿಸಿರುವುದೇ ಡಿಸ್‌ಮಿಸ್ ಮಾಡಿದವರು. ಇವತ್ತು ನೀವು ಈ ಜವಾಬ್ದಾರಿ ಸ್ಥಾನದಲ್ಲಿ ಕುಳಿತು ಚೀಫ್ ಮಿನಿಸ್ಟರ್‌ರವರಿಗೇ ಗೆಟ್ ಔಟ್ ಎಂದು ಹೇಳಬಹುದು.

ಶ್ರೀ ಎಸ್. ಎಂ. ಕೃಷ್ಣ.—ಮಾನ್ಯ ಅಧ್ಯಕ್ಷರೇ ಈ ಸಭೆಯನ್ನು ನಾವು ಕೆಲವು ಆಧಾರಗಳ ಮೇಲೆ ನಡೆಸಲಾಗುತ್ತದೆ. ಬಿಸಿನೆಸ್ ಅಡ್ವೈಜರಿ ಕಮಿಟಿಯಲ್ಲಿ ಈಗಾಗಲೇ ಕೆಲವು ನಿರ್ಣಯಗಳಾಗಿವೆ. ಅವಕ್ಕೆ ವಿರೋಧ ಪಕ್ಷದ ನಾಯಕರು ಮತ್ತಿತರ ಸದಸ್ಯರುಗಳು ಜವಾಬ್ದಾರರಾಗಿದ್ದಾರೆ. ಶನಿವಾರದ ದಿವಸದಿಂದ ಮಾನ್ಯ ಬಂಗಾರಪ್ಪನವರು ಈ ವಿಷಯವನ್ನು ಪ್ರಸ್ತಾಪ

(ಶ್ರೀ ಎಸ್. ಎಂ. ಕೃಷ್ಣ)

ಮಾಡುತ್ತಲೇ ಬಂದಿದ್ದಾರೆ. ಕಳೆದ ಎರಡು ದಾರಿ ಇದರ ಬಗ್ಗೆ ಚರ್ಚೆಯಾದಾಗ ಮುಖ್ಯಮಂತ್ರಿಗಳು ಈ ಸಭೆಯಲ್ಲಿ ಹಾಜರಾಗಿದ್ದರು. ಅವರು ಹೇಳಿಕೆ ಕೊಡತಕ್ಕಂಥದ್ದು ಏನಾದರೂ ಇದ್ದರೆ, ಅವರು ಅವತ್ತಿನ ದಿವಸವೇ ಆ ಸಮಯದಲ್ಲಿ ಉಪಯೋಗಿಸಿಕೊಂಡು ಹೇಳಬಹುದಾಗಿತ್ತು.. ಇವತ್ತು ನಾವು ಮುಖ್ಯಮಂತ್ರಿಗಳನ್ನು ಇಂಥದ್ದೇ ಹೇಳಿಕೆ ಕೊಡಿ ಎಂದು ಒತ್ತಾಯ ಮಾಡುವುದಕ್ಕೆ ಬರುವುದಿಲ್ಲವೆಂದು ಸ್ಪಷ್ಟವಾಗಿ ತಿಳಿದುಕೊಂಡಿದ್ದೇನೆ. ಯಾವ ಕಾಲದಲ್ಲಿ ಅವರು ಹೇಳಿಕೆ ಕೊಡಬೇಕು ಎನ್ನುವಂಥದ್ದು ಮುಖ್ಯ ಮಂತ್ರಿಗಳಿಗೆ ಗೊತ್ತಿದೆ ಈಗ ಮಾನ್ಯ ದೇವೇಗೌಡರವರು ಏನು ಓದಿ ಹೇಳಿದರು ಅದನ್ನು ನಾವು ಕೇಳಿದ್ದೇವೆ. ಆದುದರಿಂದ ಅವರ ಬಗ್ಗೆ ಮುಖ್ಯಮಂತ್ರಿಗಳು ಮತ್ತೆ ಈ ಸದನಕ್ಕೆ ಬಂದಾಗ ಪ್ರಸ್ತಾಪ ಮಾಡಿದರೆ ಬಹಳ ಅರ್ಥಪೂರ್ಣವಾಗಬಹುದೇನೋ ಎಂದು ನಂಗನ್ನಿಸುತ್ತದೆ. ಆದುದರಿಂದ ಮಾನ್ಯ ಸದಸ್ಯರಲ್ಲಿ ಪ್ರಾರ್ಥನೆ ಮಾಡುತ್ತೇನೆ. ದಯವಿಟ್ಟು ಈ ಸದನದ ಇಂದಿನ ಕಾರ್ಯಕಲಾಪಗಳನ್ನು ಪ್ರಾರಂಭ ಮಾಡುವುದಕ್ಕೆ ದೊಡ್ಡ ಮನಸ್ಸು ಮಾಡಬೇಕು ಮತ್ತು ಔದಾರ್ಯದ ಮನಸ್ಸು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಈ ಸಭೆ ಇವತ್ತಿಗೇ ಏನೂ ಮುಗಿಯುವುದಿಲ್ಲ, 7ನೇ ತಾರೀಖಿನವರೆಗೂ ನಡೆಯುತ್ತದೆ.

ಶ್ರೀ ಕೋಣಂದೂರು ಲಿಂಗಪ್ಪ.—ನಮಗೆ ಬಂದಿರುವ ಸಂಕಷ್ಟ ಏನೆಂದರೆ.....

ಅಧ್ಯಕ್ಷರು.—ಮಾನ್ಯ ಸದಸ್ಯರು ಸಂಕಷ್ಟ ಪಡಬೇಕಾದದ್ದು ಏನೂ ಇಲ್ಲ.

ಶ್ರೀ ಕೋಣಂದೂರು ಲಿಂಗಪ್ಪ.—ಮಾನ್ಯ ಅಧ್ಯಕ್ಷರೇ, 100ಕ್ಕೆ 80ಷ್ಟು ಪ್ರಾಮುಖ್ಯತೆಯನ್ನು ವಿಧಾನ ಸಭೆಗೇ ಕೊಡಬೇಕು. ಇವತ್ತು ಈ ಸಭೆಗೆ ಬರುವುದಕ್ಕೆ ಆಗುವುದಿಲ್ಲವೆಂದು ಮುಖ್ಯಮಂತ್ರಿಗಳು ಹೇಳಿದರೆ ಹೇಗೆ ? 7ನೇ ತಾರೀಖಿನವರೆಗೆ ಮುಖ್ಯಮಂತ್ರಿಗಳು ಇರುವುದಿಲ್ಲವೆಂದು ಎದ್ದಿ ಬಂದಿದೆ.

ಶ್ರೀ ಎಸ್. ಎಂ. ಕೃಷ್ಣ.—ಯಾವ ಪತ್ರಿಕೆಯಲ್ಲಿ ನುದ್ದಿ ಬಂದಿದೆ ? ಬರೀ ಊಹೆಯಲ್ಲಿ ಮುಖ್ಯಮಂತ್ರಿಗಳ ಕಾರ್ಯಕ್ರಮವನ್ನು ಹೇಳುತ್ತೀರಾ ?

MADAM SPEAKER.—The house now rises and will meet after half an hour.

[The House rose at Seven minutes Past Three of the Clock and re-assembled at Twenty Six minutes Past Four of the Clock.]

[MADAM SPEAKER in the Chair.]

† ಶ್ರೀ ಕೆ. ಎಂ. ನಾಗಣ್ಣ (ಚಿಕ್ಕಜೇಡಿ).—ಈಗತಾನೆ ಅರ್ಧ ಗಂಟೆ ವಿರಾಮ ಕೊಟ್ಟಿದ್ದು ತಮ್ಮ ಕೊಠಡಿಗೆ ಹೋಗುವ ಮುನ್ನ ಒಂದು ಪ್ರಸಂಗ ನಡೆದಿತ್ತು. ಅದು ತಮಗೆಲ್ಲ ಗೊತ್ತಿದೆ.

ಅಧ್ಯಕ್ಷರು.—ಅದೇ ವಿಚಾರವನ್ನೇ ಹೊರವಾಗಿ ಹೇಳುವುದಕ್ಕೆ ಪ್ರಯತ್ನ ಮಾಡುತ್ತಿದ್ದೀರಾ ?

ಶ್ರೀ ಕೆ. ಎಂ. ನಾಗಣ್ಣ.—ಇದು ಬಹಳ ಆಕಸ್ಮಿಕವಾದ ಘಟನೆ ಎಂದು ನನ್ನ ಅಭಿಪ್ರಾಯ. ಇದುವರೆಗೆ ಭಾರತಕ್ಕೆ ಸ್ವಾತಂತ್ರ್ಯ ಬಂದ ಮೇಲೆ, ಕರ್ನಾಟಕಕ್ಕೆ ಪ್ರಜಾಪ್ರತಿನಿಧಿಗಳ ಆಳ್ವಿಕೆ ಬಂದ ಮೇಲೆ ಈ ತರಹದ ಪ್ರಸಂಗ ನನ್ನ ಅನುಭವಕ್ಕೆ ಯಾವತ್ತೂ ಬಂದಿಲ್ಲ. ಸರ್ಕಾರದ ಮೇಲೆ ದೋಷಾರೋಪಣೆಗಳಿದ್ದರೆ ಅಥವಾ ಮುಖ್ಯ ಮಂತ್ರಿಗಳ ಮೇಲೆ ಅಥವಾ ಬೇರೆ ಮಂತ್ರಿಗಳ ಮೇಲೆ ದೋಷಾರೋಪಣೆಗಳಿದ್ದರೆ ಆ ಪಕ್ಷದವರು ಸದಸ್ಯರು ಪ್ರಧಾನ ಮಂತ್ರಿಗಳಿಗೆ ದೂರು ಕಳುಹಿಸುತ್ತಿದ್ದರು. ಹಿಂದೆ ಮುಖ್ಯಮಂತ್ರಿಗಳಾಗಿದ್ದ ಶ್ರೀ ನಿಜಲಿಂಗಪ್ಪನವರ ಮೇಲೆ 16 ಪಾಯಿಂಟ್ಸ್ ಹಾಕಿ, ಅಪಾದಿಸಿದರು ಕಳಹಿಸಿದ್ದರು ಎಂದು ಪತ್ರಿಕೆಗಳಲ್ಲಿ ಬಂದಿತ್ತು. ಸದನದಲ್ಲಿ ಈ ರೀತಿ ವಾದವಿವಾದ, ಥಾಲೆಂಜ್ ನಡೆದದ್ದು ಇಲ್ಲ. ಶ್ರೀಮಾನ್ ದೇವರಾಜ ಅರಸು ಅವರು ಮುಖ್ಯಮಂತ್ರಿಯಾಗಿ ಬಿಜಾಪುರದಲ್ಲಿ ಮಾಡಿದ ಭಾಷಣದ ಬಗ್ಗೆ ಈಗಲೂ ಕೂಡ "I stand by it"

ಎನ್ನುವ ಮಾತನ್ನು ಹೇಳಿದ್ದಾರೆ. ನಾನೇನೂ ಅಂಥದ್ದು ಮಾಡಿಲ್ಲ, ಥಾಲೆಂಜಿಗೆ ಸಿಕ್ಕಿಕೊಳ್ಳುವುದಿಲ್ಲ ಎನ್ನುವ ನಂಬಿಕೆ ಅವರಿಗೆ ಇದೆ. ವಿರೋಧ ಪಕ್ಷದ ನಾಯಕರು ಅದನ್ನು ಥಾಲೆಂಜ್ ಮಾಡಿ ಪ್ರೂವ್ ಮಾಡುವುದಕ್ಕೆ ತಯಾರಾಗಿದ್ದೇನೆ, ಇಲ್ಲದೆ ಹೋದರೆ ರಾಜಿನಾಮೆ ಕೊಡುತ್ತೇನೆ, ರಾಜಕೀಯದಿಂದ ನಿವೃತ್ತಿಯಾಗುತ್ತೇನೆ ಎಂದು ಹೇಳಿದ್ದಾರೆ. ಇದರ ಫಲವಾಗಿ ವಿರೋಧಪಕ್ಷದ ನಾಯಕರನ್ನು ವಿರೋಧಪಕ್ಷದ ಸದಸ್ಯರು, ನಾನು ಇರಲಿಲ್ಲ, ಛೇರಾವೊ ಕೂಡ ಮಾಡಿದ್ದಾರೆ. ನಗರದಲ್ಲಿ ಯಾವ ಸ್ಥಿತಿ ಇದೆ ಎಂದರೆ ಎಲ್ಲ ಗೊಂದಲದಲ್ಲಿದ್ದಾರೆ. ವಿರೋಧಪಕ್ಷದ ನಾಯಕರು ಹೇಳಿರುವುದು ಸರಿಯೇ ತಪ್ಪೇ ಎನ್ನುವ ಭಾವನೆ ಜನರಲ್ಲಿದೆ, ಇನ್ನೂ ತೀರ್ಮಾನ ಮಾಡಿಕೊಂಡಿಲ್ಲ. ವಿರೋಧಪಕ್ಷದ ನಾಯಕರು ಎಷ್ಟುಮಟ್ಟಿಗೆ ಥಾಲೆಂಜ್ ಪ್ರೂವ್ ಮಾಡುತ್ತೇನೆಂದು ಹೇಳುತ್ತಾರೆ ಅಷ್ಟು ಮಾಡಲಿಕ್ಕೆ ಅವರಿಗೆ ಸಾಧ್ಯವಾಗದೆ ಇರಬಹುದು, ಅಷ್ಟಕ್ಕೆ ಭಾಗಿಗಳಾಗದಿರಬಹುದು ಎಂದು ನನ್ನ ಸ್ವಂತ ಅಭಿಪ್ರಾಯ. ಆದುದರಿಂದ ನಾನು ತಮ್ಮ ಮೂಲಕ ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ಅವರು ಇಲ್ಲದ್ದರೆ ಚೆನ್ನಾಗಿತ್ತು, ವಿರೋಧ ಪಕ್ಷದ ನಾಯಕರು ಏನು ಥಾಲೆಂಜ್ ಹಾಕಿದ್ದಾರೆ ಅದಕ್ಕೆ ಅವರು ದಯಮಾಡಿ ಒಪ್ಪಿಕೊಳ್ಳಬೇಕು. ಅವರು ಒಪ್ಪಿಕೊಂಡರೆ ಇದರಲ್ಲಿ ಅವರು ಉತ್ತೀರ್ಣರಾಗುತ್ತಾರೆ ಎನ್ನುವ ನಂಬಿಕೆ ನನಗೆ ಇದೆ. ಹೀಗೆ ಮಾಡುವುದರಿಂದ ಇಡೀ ಕರ್ನಾಟಕದಲ್ಲಿ, ಇಡೀ ಭಾರತದಲ್ಲಿ ಬಹಳ ಕೀರ್ತಿಶಾಲಿಗಳಾಗುವ ಸಂಭವ ಒದಗಿದೆ. ಇಂಥ ಅವಕಾಶವನ್ನು ಕಳೆದುಕೊಳ್ಳದೆ ಅವರು ಥಾಲೆಂಜನ್ನು ಸ್ವೀಕಾರ ಮಾಡಿ, ಆ ಥಾಲೆಂಜಿನಲ್ಲಿ ಹುರುಳಿಲ್ಲ ಎನ್ನುವುದನ್ನು ಜನತೆಗೆ ತೋರ್ಪಡಿಸಬೇಕೆಂದು ತಮ್ಮ ಮೂಲಕ ಮುಖ್ಯ ಮಂತ್ರಿಗೆಳಿಗೆ ಪ್ರಾರ್ಥನೆ ಮಾಡಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಮುಖ್ಯಮಂತ್ರಿಗಳಿಗೆ ಸಂಬಂಧಪಟ್ಟ ಬಿಲ್ ಮೇಲ್ಮನೆಯಲ್ಲಿ ಪೆಂಡಿಂಗ್ ಇದೆ, ಅವರು ಅಲ್ಲಿದ್ದಾರೆಂದು ನಾನಾಗಲೇ ಹೇಳಿದ್ದೇನೆ. ಅವರು ಇಲ್ಲಿ ಇರುವಾಗ ಈ ವಿಚಾರವನ್ನು ಹೇಳಿ ಎಂದೂ ಹೇಳಿದ್ದೇನೆ. ಮಾನ್ಯ ಸದಸ್ಯರು ಪುನಃ ಅದೇ ವಿಚಾರವನ್ನು ಪ್ರಸ್ತಾಪ ಮಾಡುತ್ತ ಹೋದರೆ ಸಭೆಯ ಕಾರ್ಯಕಲಾಪಗಳನ್ನು ನಡೆಸಬೇಕು ಎನ್ನುವುದಕ್ಕೆ ತಾವು ಒಪ್ಪುವುದಿಲ್ಲವೆಂದು ಭಾವಿಸಬೇಕಾಗುತ್ತದೆ.

ಶ್ರೀ ಕೋಣಂದೂರು ಲಿಂಗಪ್ಪ.—ಸಭೆಯ ಕಾರ್ಯಕಲಾಪಗಳನ್ನು ನಡೆಸುವುದರಲ್ಲಿ ನಾವು ಅಡ್ಡಿ ಬರುವುದಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಈ ಸದನಕ್ಕೆ ಬಂದು ತಮ್ಮ ಅಭಿಪ್ರಾಯವನ್ನು ಕೊಡದೆ ಈ ಸದನದ ಕಾರ್ಯಕಲಾಪಗಳಿಗೆ ಅಡ್ಡಿಯನ್ನುಂಟು ಮಾಡುತ್ತಿರುವವರು ಮಾನ್ಯ ಮುಖ್ಯ ಮಂತ್ರಿಗಳೇ ಹೊರತು ನಾವಲ್ಲವೆಂದು ಹೇಳುತ್ತೇನೆ.

4-30 P.M.

ಅಧ್ಯಕ್ಷರು.—ಮಾನ್ಯ ಸದಸ್ಯರು ತಮ್ಮ ಅಭಿಪ್ರಾಯವನ್ನು ಕೊಡಬಹುದು. ಆದರೆ ಹೇಳಿಕೆಯನ್ನು ಕೊಡಿ ಎಂದು ಮುಖ್ಯ ಮಂತ್ರಿಗಳನ್ನು ಬಲವಂತ ಮಾಡುವುದಕ್ಕೆ ಸಾಧ್ಯವಿಲ್ಲ.

ಶ್ರೀ ಕೋಣಂದೂರು ಲಿಂಗಪ್ಪ.—ಬಲವಂತವಲ್ಲ. ಅವು ಅವರ ನೈತಿಕ ಜವಾಬ್ದಾರಿ.

ಅಧ್ಯಕ್ಷರು.—ನೈತಿಕ ಮಟ್ಟದ ಮೇಲೆ ಈ ಸಭೆ ನಡೆಯುವುದಿಲ್ಲ. ಇದಕ್ಕೆ ರೂಲ್ಸ್ ಕಾನೂನುಗಳು ಇವೆ. ಅದರ ಆಧಾರದ ಮೇಲೆ ಈ ಸಭೆಯನ್ನು ನಡೆಸಬೇಕಾಗುತ್ತದೆ. ನೈತಿಕ ಮಟ್ಟದ ಮೇಲೆ ಚಾಲೆಂಜ್ ಮಾಡುವುದಕ್ಕೆ ಬೇರೆ ಪ್ಲಾಟ್‌ಫಾರಂ ಇದೆ. ರೂಲ್ಸ್ ಪ್ರಕಾರ ಈ ಸಭೆಯನ್ನು ನಡೆಸಬೇಕಾಗುತ್ತದೆ. ಈಗ 4½ ಗಂಟೆಯಾಗಿದೆ. ಬಿಜಿನೆಸ್ ಅಡ್ವೈಜರಿ ಕಮಿಟಿಯವರ ತೀರ್ಮಾನದ ಪ್ರಕಾರ ಯೂನಿವರ್ಸಿಟಿ ಬಿಲ್ಸ್ ಸೈನ್ಸ್ ಬಿಲ್ ಮುಕ್ಯಾಲುಭಾಗ ಚರ್ಚೆ ಆಗಬೇಕಾಗಿತ್ತು. ಮಾನ್ಯ ಸದಸ್ಯರಿಗೆ ಏನಾದರೂ ಈ ಸಭೆಯ ಕಾರ್ಯಕಲಾಪವನ್ನು ನಡೆಸಬಾರದು ಎಂದು ಇರಾದೆ ಇದೆಯೇ ?

ಅನೇಕ ಮಾನ್ಯ ಸದಸ್ಯರು.—ಆ ರೀತಿ ಇಲ್ಲ.

ಶ್ರೀ ಕೆ. ಶ್ರೀರಾಮುಲು.—ಕಳೆದ 4-5 ದಿವಸಗಳಿಂದಲೂ ಕೂಡ ಒಂದಲ್ಲ ಒಂದು ವಿಧದಲ್ಲಿ ಮಾನ್ಯ ಸದಸ್ಯರಾದ ಶ್ರೀಮಾನ್ ಬಂಗಾರಪ್ಪನವರು ಈ ಸಭೆಯಲ್ಲಿ ಅದನ್ನು ಎತ್ತುತ್ತಿದ್ದಾರೆ. ಇದು ನನಗಂತೂ ಅರ್ಥವಾಗಲಿಲ್ಲ. ಶನಿವಾರ ಮತ್ತು ಇವೊತ್ತು ಕೂಡ ನಿಜವಾಗಿ ಕರ್ನಾಟಕದ ಜನತೆಗೆ ಈ ಸಭೆಯವರು ಒಳ್ಳೆಯ ಕೆಲಸವನ್ನು ಮಾಡಿದ್ದೇವೆಯೇ ಎಂದರೆ ನನ್ನವರೆಗೂ ಇಲ್ಲ ಎಂದು ಒಪ್ಪಿಕೊಳ್ಳಬೇಕಾಗುತ್ತದೆ. ಒಂದೇ ಮಾತಿನಲ್ಲಿ ಹೇಳುವುದಾದರೆ ಮಾನ್ಯ ಮುಖ್ಯ ಮಂತ್ರಿಗಳು ಹೇಳಿಕೆ ಮಾಡತಕ್ಕಂಥಾ ವಿಷಯಗಳು ಏನಾದರೂ ಇದ್ದರೆ ಕಾನೂನು ಪ್ರಕಾರ ಆ

(ಶ್ರೀ ಕೆ. ಶ್ರೀರಾಮುಲು)

ರೀತಿ ಅವರು ಹೇಳಿಕೆಯನ್ನು ಕೊಡುವಂತೆ ಅವಕಾಶವನ್ನು ಕಲ್ಪಿಸಿಕೊಳ್ಳುವುದಕ್ಕೆ ಅವಕಾಶ ಇದೆ. ಆ ರೀತಿ ಮಾಡುವುದಕ್ಕೆ ಏತಕ್ಕೆ ಹೆದರುತ್ತಾರೆ ಎಂಬುದು ನನಗೆ ಅರ್ಥವಾಗುವುದಿಲ್ಲ. ಅಥವಾ ತಮ್ಮ ಹತ್ತಿರ ಏನೂ ಇಲ್ಲದೆ ಒಂದು ಕಮಿಟಿಯನ್ನು ಮಾಡಿ ಎಂದು ಕೇಳುತ್ತಿದ್ದಾರೆ. ಕಮಿಟಿ ಮಾಡುವುದು ಕಾನೂನಿನ ಚೌಕಟ್ಟಿನಲ್ಲಿ ಬರುತ್ತದೆಯೇ, ಒಂದು ವೇಳೆ ಅದು ಕಾನೂನಿನ ಚೌಕಟ್ಟಿನಲ್ಲಿ ಬಾರದಿದ್ದರೆ ಬೇರೆ ಯಾವ ರೀತಿಯಲ್ಲಿ ಅವಕಾಶ ಇದೆ ? ಇದನ್ನು ಯೋಚನೆ ಮಾಡದೆ ಇಲ್ಲ ಸಾರ್ವಜನಿಕ ಕೆಲಸ ಮಾಡುವುದಕ್ಕೆ ಅಡ್ಡಿ ಪಡಿಸುವುದು ಸರಿಯೇ ? ಪದೇ ಪದೇ ಹೇಳಿದ್ದನ್ನೇ ಹೇಳುತ್ತಿದ್ದರೆ ಹೇಗೆ ?

ಶ್ರೀ ಕೋಣಂದೂರು ಲಿಂಗಪ್ಪ.. ನೀವು ಮಾಡಿದ್ದನ್ನೇ ಮಾಡಿ.

ಶ್ರೀ ಕೆ. ಶ್ರೀರಾಮುಲು.—ಅದು ನಿಮ್ಮ ಭಾವನೆ. ನಿಮ್ಮ ಪಾರ್ಟಿ ವಿಷಯವನ್ನು ಹೇಳಬೇಕಾದರೆ ಬಲವಾಗಿ ಹೇಳಬಲ್ಲೆ.

ಶ್ರೀ ಕೋಣಂದೂರು ಲಿಂಗಪ್ಪ.—ಹೇಳಿ ಹೇಳಿ ಕೇಳುತ್ತೇವೆ.

ಶ್ರೀ ಕೆ. ಶ್ರೀರಾಮುಲು.—ಶ್ರೀಮಾನ್ ಬಂಗಾರಪ್ಪನವರು, ಶ್ರೀಮಾನ್ ಕೋಣಂದೂರು ಲಿಂಗಪ್ಪನವರು ಹಾಗೂ ಶ್ರೀಮಾನ್ ಮಂಜುನಾಥ್ ಅವರು ಅನೇಕ ಸಾರಿ ಈ ವಿಷಯವನ್ನು ಹೇಳಿದ್ದಾರೆ. ಆದರೆ ನಿಜಾಂಶವೇನು ಎನ್ನುವುದನ್ನು ಕರ್ನಾಟಕದ ಜನತೆಗೆ ಹೇಳುವುದಕ್ಕೆ ಅವರಿಗೆ ಶಕ್ತಿ ಇಲ್ಲ. ಆದಕಾರಣ ಈಗ ಈ ಸಭೆಯ ಕಾರ್ಯಕಲಾಪಗಳು ನಡೆಯುವುದಕ್ಕೆ ಅವಕಾಶ ಕೊಡಬೇಕು ಎಂದು ನಾನು ಅಧ್ಯಕ್ಷರ ಮುಖಾಂತರ ಕೇಳಿಕೊಳ್ಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಶ್ರೀಮಾನ್ ಶ್ರೀರಾಮುಲು ಅವರು ಹೇಳಿದ್ದು ನನಗೆ ಅರ್ಥವಾಗಲಿಲ್ಲ.

ಅಧ್ಯಕ್ಷರು.—ನನಗೆ ಎಲ್ಲಾ ಅರ್ಥವಾಯಿತು. ನನಗೆ ಎಲ್ಲರು ಹೇಳಿದ್ದೂ ಅರ್ಥವಾಯಿತು.

ಶ್ರೀ ಕಾಗೋಡು ತಿಮ್ಮಪ್ಪ.—ಶ್ರೀಮಾನ್ ದೇವೇಗೌಡರು ಈ ಸದನದ ಮುಂದೆ ಮಾನ್ಯ ಮುಖ್ಯ ಮಂತ್ರಿಗಳಿಗೆ ಬರೆದ ಕಾಗದವನ್ನು ಓದಿ ಹೇಳಿದ್ದಾರೆ. ಸ್ವಜನ ಪಕ್ಷಪಾತ, ಭ್ರಷ್ಟಾಚಾರ, ಮತ್ತು ಜಾತೀಯತೆ ಯಾವುದೂ ನಡೆದಿಲ್ಲ ಎಂದು ಮುಖ್ಯ ಮಂತ್ರಿಗಳು ಏನು ಹೇಳುತ್ತಾರೆ ಅದು ನಡೆದಿದೆ ಎನ್ನತಕ್ಕಂಥಾದ್ದನ್ನು ರುಜುವಾತು ಮಾಡಿಕೊಡುವುದಕ್ಕೆ ಮಾನ್ಯ ವಿರೋಧಪಕ್ಷದ ನಾಯಕರಾದ ಶ್ರೀಮಾನ್ ದೇವೇಗೌಡರು ಸಿದ್ಧರಾಗಿದ್ದಾರೆ. ಆ ಬಗ್ಗೆ ಅವರು ಸಾಕಷ್ಟು ಸಾಹಿತ್ಯವನ್ನು ಇಟ್ಟುಕೊಂಡಿದ್ದೇನೆ ಎಂದು ಹೇಳುತ್ತಾರೆ. ಒಬ್ಬ ವಿರೋಧಪಕ್ಷದ ನಾಯಕರು ಒಂದು ಅಪಾದನೆಯನ್ನು ಮಾಡಿ ಅದನ್ನು ರುಜುವಾತು ಮಾಡುವುದಕ್ಕೆ ಸಾಹಿತ್ಯವನ್ನು ಒದಗಿಸುತ್ತೇನೆ ಎಂದರೆ ಅದಕ್ಕೆ ಒಂದು ಅವಕಾಶವನ್ನು ಕಲ್ಪಿಸಬೇಕಾಗುತ್ತದೆ. ನ್ಯಾಯಾಂಗ ತನಿಖೆಯನ್ನು ಏರ್ಪಡಿಸಿ, ನಾನು ಮಾಡಿರತಕ್ಕ ಅಪಾದನೆಯನ್ನು ರುಜುವಾತು ಮಾಡುತ್ತೇನೆ ಎಂದು ಮಾನ್ಯ ವಿರೋಧ ಪಕ್ಷದ ನಾಯಕರು ತಿಳಿಸಿದ್ದಾರೆ. ಆದ್ದರಿಂದ ಅವರು ಮಾಡಿರತಕ್ಕ ಚಾಲೆಂಜನ್ನು ಮಾನ್ಯ ಮುಖ್ಯ ಮಂತ್ರಿಗಳು ಸ್ವೀಕಾರ ಮಾಡುತ್ತಾರೆಯೇ ಅಥವಾ ಸ್ವೀಕಾರ ಮಾಡುವುದಕ್ಕೆ ಆಗುವುದಿಲ್ಲ ಎಂದು ಹೇಳುತ್ತಾರೆಯೇ ? ಇದಕ್ಕೆ ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು.— ಯಾವ ನಿಯಮದ ಆಧಾರದ ಮೇಲೆ ನಾನು ಮುಖ್ಯ ಮಂತ್ರಿಗಳನ್ನು ಹೇಳಿಕೆ ಕೊಡಿ ಎಂದು ಒತ್ತಾಯ ಮಾಡಲಿ ? ಯಾವ ರೂಲ್ಸ್ ಪ್ರಕಾರ ಮಾನ್ಯ ಸದಸ್ಯರು ಅದನ್ನ ಹೇಳುತ್ತಿದ್ದೀರಿ ಎಂಬುದನ್ನು ನನಗೆ ತೋರಿಸಿ.

ಶ್ರೀ ಎಸ್. ಬಂಗಾರಪ್ಪ.—ಯಾವ ರೂಲ್ಸ್ ಪ್ರಕಾರ ಮುಖ್ಯ ಮಂತ್ರಿಗಳು ಹೇಳಿಕೆಯನ್ನು ಕೊಟ್ಟರೋ ಆ ರೂಲ್ಸ್ ಪ್ರಕಾರ.

ಅಧ್ಯಕ್ಷರು.—ಅದನ್ನು ಹೊರಗಡೆ ಹೇಳಿ.

ಶ್ರೀ ಟಿ. ಎಂ. ಮಂಜುನಾಥ್.—ಮಾನ್ಯ ಅಧ್ಯಕ್ಷರೇ ನಿನ್ನೆದಿವಸ ಈ ಸಭೆಯ ಅಧ್ಯಕ್ಷ ಪೀಠದಲ್ಲಿ ಇದ್ದ ಉಪಾಧ್ಯಕ್ಷರು ಶ್ರೀಮಾನ್ ದೇವೇಗೌಡರನ್ನು ಕುರಿತು ನೀವು ಏನಾದರೂ ಹೇಳಿಕೆ ಕೊಡುವುದು ಇದೆಯೇ ಎಂದು ಕೇಳಿದರು. ಅದೇರೀತಿ ಮಾನ್ಯ ಮುಖ್ಯ ಮಂತ್ರಿಗಳನ್ನು ಅವರು ಹೇಳಿಕೆ ಏನಾದರೂ ಇದ್ದರೆ ಹೇಳಿಕೆ ಮಾಡಿ ಎಂದು ಆದೇಶವನ್ನು ಕೊಡಿ ಎಂದು ನಾನು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಶ್ರೀಮಾನ್ ಮಂಜುನಾಥ್ ಅವರು ಈ ಸಭೆಗೆ ಬಂದು 2½ ವರ್ಷಗಳಾದುವು. ಇನ್ನೂ ಈ ಸಭೆಯಲ್ಲಿ ಯಾವರೀತಿ ಮಾತನಾಡಬೇಕು ಎಂಬುದು ಅವರಿಗೆ ಗೊತ್ತಾಗಲಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಈಗ ಮಾನ್ಯ ವಿರೋಧ ಪಕ್ಷದ ನಾಯಕರು ತಮ್ಮ ಮಾತಿನ ಪ್ರಕಾರ ಅವರು ಏನು ಅಪಾದನೆ ಮಾಡಿದ್ದಾರೆ ಅದನ್ನು ರುಜುವಾತು ಮಾಡುವುದಕ್ಕೆ ತಯಾರಾಗಿದ್ದಾರೆ, ಅದನ್ನು ಅವರು ರುಜುವಾತು ಮಾಡುವುದಕ್ಕೆ ಅವಕಾಶವನ್ನು ಕಲ್ಪಿಸಬೇಕು. ಅವರಿಗೆ ಅವಕಾಶ ಸಿಕ್ಕದಿದ್ದರೆ ಸಾರ್ವಜನಿಕರು ದೇವೇಗೌಡರು ಚಾಲೆಂಜ್ ಮಾಡುತ್ತಾರೆ ಏತಕ್ಕೆ ರುಜುವಾತು ಮಾಡಲಿಲ್ಲ ಎಂದು ಕೇಳುತ್ತಾರೆ. ಆದ್ದರಿಂದ ಅವರು ರುಜುವಾತು ಮಾಡಲು ಅವಕಾಶವನ್ನು ಕಲ್ಪಿಸಬೇಕು. ದೇವೇಗೌಡರು ಹೇಳಿಕೆಯನ್ನು ಕೊಟ್ಟು ಸಾರ್ವಜನಿಕರ ಎದುರಿನಲ್ಲಿ ಸಣ್ಣವರಾಗಬಾರದು. ಅವರ ಮಾತಿಗೆ ಪುರಸ್ಕಾರವಿಲ್ಲ ಎನ್ನುವಂತಾಗಬಾರದು.

Sri H. N. NANJE GOWDA.—Madam Speaker, I would like to draw your kind attention to rule 293 of the Rules of Procedure' wherein it is stated as follows:—

> "A member may, with the permission of the Speaker make a personal explanation although there is no question before the Assembly but in this case no debatable matter may be brought forward, and no debate shall arise."

As it is, the hon. the Leader of the Opposition Sri A. D. Deve Gowda, with your kind permission, has made a personal explanation. As per the rule there cannot be any debate. Therefore. the matter Bill have to be closed at this atage.

ಶ್ರೀ ಕೋಣಂದೂರು ಲಿಂಗಪ್ಪ.—ಅಧ್ಯಕ್ಷರೇ ರೂಲ್ 299ರ ಪ್ರಕಾರ ನಾನು ಒಂದು ವಿಚಾರವನ್ನು ಪ್ರಸ್ತಾಪ ಮಾಡಬೇಕೆಂದಿದ್ದೇನೆ.

ಅಧ್ಯಕ್ಷರು.—ರೂಲ್ಸ್ ಮುರಿದು ಎಷ್ಟೋ ಗಂಟೆಯಾಯಿತು.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಮಾನ್ಯ ಅಧ್ಯಕ್ಷರೇ ಒಬ್ಬ ತಾಯಿಯ ಕಾಲದಲ್ಲಿ ಒಂದು ಸತ್ ಸಂಪ್ರದಾಯ ಸ್ಥಾಪನೆಯಾಗಬೇಕು.

ಅಧ್ಯಕ್ಷರು.—ಎಲ್ಲದಕ್ಕೂ ಸತ್‌ಸಂಪ್ರದಾಯ ಬರಬೇಕು. ಯಾವ ಆಧಾರದ ಮೇಲೆ ನಾನು ಮುಖ್ಯ ಮಂತ್ರಿಗಳನ್ನು ಸ್ಟೇಟ್‌ಮೆಂಟ್ ಮಾಡಿ ಎಂದು ಹೇಳಲಿ ?

ಶ್ರೀ ಟಿ. ಎಂ. ಮಂಜುನಾಥ್ —ಮಾನ್ಯ ಅಧ್ಯಕ್ಷರೇ 2½ ವರ್ಷವಾದರೂ ನನಗೆ ಮಾತನಾಡುವುದು ಗೊತ್ತಾಗಲಿಲ್ಲ ಎಂದು ತಾವು ಹೇಳಿದಿರಿ, ಮೊನ್ನೆ ಶನಿವಾರದ ದಿವಸ ವಿರೋಧ ಪಕ್ಷದ ನಾಯಕರನ್ನು ಫೇರಾವ್ ಮಾಡಿದಾಗ ಅಧ್ಯಕ್ಷ ಪೀಠದಲ್ಲಿದ್ದ ಉಪಾಧ್ಯಕ್ಷರು ವಿರೋಧ ಪಕ್ಷದ ನಾಯಕರನ್ನು ಕುರಿತು ನೀವು ಹೇಳುವಂಥಾದ್ದು ಏನಾದರೂ ಇದ್ದರೆ ಹೇಳಿ ಎಂದು ಹೇಳಿದರು. ಅದೇ ಮನಸ್ಸಿನಿಂದ ತಾವು ಈಗ ಮಾನ್ಯ ಮುಖ್ಯ ಮಂತ್ರಿಗಳಿಗೆ ಏನಾದರೂ ಹೇಳುವುದಿದ್ದರೆ ಹೇಳಿ ಎಂದು ಅವರಿಗೆ ಆದೇಶವನ್ನು ಕೊಟ್ಟರೆ ನ್ಯಾಯ ತಮಗೆ ತುಂಬಾ ಚಿರರುಣಿಗಳಾಗುತ್ತೇವೆ. ಆ ರೀತಿ ತಾವು ಮುಖ್ಯ ಮಂತ್ರಿಗಳಿಗೆ ಆದೇಶವನ್ನು ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಆರ್.—ಶ್ರೀನಿವಾಸುಲು ನಾಯುಡು.—ಅಧ್ಯಕ್ಷರೇ ತಾವು ಪದೇ ಪದೇ ಹೇಳುತ್ತಿದ್ದರೂ ಶನಿವಾರ ತಳೆದಂಥ ನಿಲುವನ್ನೇ ತಳೆಯುತ್ತಿದ್ದಾರೆ. ಸದನದ ಕಾರ್ಯ ಕಲಾಪಗಳನ್ನು ನಿಲ್ಲಿಸಬೇಕು, ಕಾರ್ಯಕಲಾಪಗಳನ್ನು ತಡೆಗಟ್ಟಬೇಕು ಎಂದು ವಿರೋಧ ಪಕ್ಷದವರು ಈರೀತಿ ಉದ್ದಿಶ್ಯಪೂರ್ವಕವಾಗಿ ಮಾಡುತ್ತಿದ್ದಾರೆ.

Sri S. BANGARAPPA.—I strongly protest.

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯುಡು.—ಮಾನ್ಯ ವಿರೋಧ ಪಕ್ಷದ ನಾಯಕರನ್ನು ಸದನದ ಕಾರ್ಯಕಲಾಪಗಳಿಗೆ ತೊಂದರೆ ಉಂಟುಮಾಡದೇ, ಸಭೆಯ ಮುಂದೆ ಇರತಕ್ಕ ಬಿಲ್‌ಗಳನ್ನು ಪಾಸ್ ಮಾಡುವುದಕ್ಕೆ ಅವಕಾಶ ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೋಣಂದೂರು ಲಿಂಗಪ್ಪ.—ವಿರೋಧ ಪಕ್ಷದವರು ಕುಳಿತಿರಲಿ, ಬಿಡಲಿ. ಆಡಳಿತ ಪಕ್ಷದವರು ಮೆಜಾರಿಟಿ ಇರುವುದರಿಂದ ಬಿಲ್‌ಗಳನ್ನು ಪಾಸ್ ಮಾಡಿಕೊಳ್ಳುತ್ತಾರೆ ಎನ್ನುವುದು ಇಡೀ ದೇಶಕ್ಕೇ ಗೊತ್ತಿದೆ.

ಅಧ್ಯಕ್ಷರು.—ಶಕ್ತಿ ಇದೆಯಲ್ಲ ಮಾತನಾಡುವುದಕ್ಕೆ, ಶಕ್ತಿಯೆಲ್ಲಾ ಬಿಟ್ಟು ಮಾತನಾಡುತಿದ್ದೀರಲ್ಲ.

ಶ್ರೀ ಸಿ. ಬೈರೇಗೌಡ.—ನಮಗೆ ಶಕ್ತಿ ಇರುವುದರಿಂದ ಹೇಳುತಿದ್ದೇವೆ. ಮಾನ್ಯ ಮುಖ್ಯ ಮಂತ್ರಿಗಳು ಬಂದು ಇವತ್ತು ಸವಾಲನ್ನು ಒಪ್ಪಿದ್ದಾರೆ ಅಥವಾ ಇಲ್ಲ ಎನ್ನುವ ಮಾತನ್ನು ಹೇಳಿದರೆ ಈ ಪ್ರಶ್ನೆ ಮುಗಿಯುತ್ತದೆ.

ಅಧ್ಯಕ್ಷರು.—ನಿಮಗಾಗಲಿ, ನನಗಾಗಲೀ ರೂಲ್ಸ್ ಪ್ರಕಾರ ಮುಖ್ಯ ಮಂತ್ರಿಗಳಿಗೆ ಇದರ ಬಗ್ಗೆ ಇಲ್ಲಿ ಬಂದು ಸ್ಟೇಟ್‌ಮೆಂಟ್ ಮಾಡಿ ಎಂದು ಕೇಳುವುದಕ್ಕೆ ಸಾಧ್ಯವಿಲ್ಲ.

ಶ್ರೀ ಕೆ. ಎಚ್. ಹನುಮೇಗೌಡ.—ಮುಖ್ಯ ಮಂತ್ರಿಗಳು ಇಲ್ಲಿ ಬಂದು 2 ಮಾತುಗಳನ್ನು ಹೇಳಿದರೆ ಸಭೆ ಸುಗಮವಾಗಿ ನಡೆಯುತ್ತದೆ.

ಅಧ್ಯಕ್ಷರು.—ಅವರನ್ನು ಕೇಳುವುದಕ್ಕೆ ಅವಕಾಶ ಇಲ್ಲ.

ಶ್ರೀ ಸಿ. ಬೈರೇಗೌಡ.—ಸಭೆ ನಡೆಸುವವರು ತಾವು ತಾವು ಹೇಳಬೇಕು.

ಅಧ್ಯಕ್ಷರು.—ತಮಗೆ ಕಾರ್ಯಕರಾಪ ಬೇಕಾಗಿಲ್ಲ. I strongly feel that you do not want to transact any business.

ಶ್ರೀ ಟಿ. ಎಂ. ಮಂಜುನಾಥ್.—ಮುಖ್ಯ ಮಂತ್ರಿಗಳು ಬಿಜಾಪುರದಲ್ಲಿ ಕೇಳಿಕೆ ಕೊಟ್ಟಿದ್ದಾರೆ.

ಅಧ್ಯಕ್ಷರು.—ಅವರಿಗೆ ಇಷ್ಟ ಬಂತು ಕೊಟ್ಟರು.

ಶ್ರೀ ಸಿ. ಬೈರೇಗೌಡ.—ಪ್ರಜಾಪ್ರಭುತ್ವದಲ್ಲಿ ಅದರಲ್ಲೂ ಜವಾಬ್ದಾರಿ ಸ್ಥಾನದಲ್ಲಿ ಇರುವವರು ಮನಸ್ಸಿಗೆ ಬಂದ ಹಾಗೆ ಹೇಳಿಕೆ ಕೊಡುವುದು ಸರಿಯಲ್ಲ.

ಅಧ್ಯಕ್ಷರು.—ನೀವು ಹೇಳಿದ್ದನ್ನು ಕೇಳುವುದಕ್ಕೆ ಸರ್ಕಾರ ಇರಬೇಕೆ.

ಶ್ರೀ ಸಿ. ಬೈರೇಗೌಡ.—ಮುಖ್ಯ ಮಂತ್ರಿಗಳು ಇಷ್ಟ ಬಂದ ಹಾಗೆ ಹೇಳಿಕೆ ಕೊಡುವುದಕ್ಕೆ ಹನುಮಗು ಏನಲ್ಲ. ಅವರು ಇಡೀ ರಾಜ್ಯದ ಜವಾಬ್ದಾರಿಯನ್ನು ಹೊತ್ತಿರತಕ್ಕವರು. ಅವರು ಜವಾಬ್ದಾರಿಯುತವಾಗಿ ಹೇಳಿಕೆ ಕೊಡಬೇಕು. ರಾಜ್ಯದ ಮುಖ್ಯ ಮಂತ್ರಿಯವರು.

ಅಧ್ಯಕ್ಷರು.—ಅವರನ್ನು ಎಳೇ ಮಕ್ಕಳು, ಹನುಮಕ್ಕಳು ಎಂದು ನೀವು ಏಕೆ ಭಾವನೆ ಮಾಡಿಕೊಳ್ಳುತ್ತೀರಿ ?

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಸಭಾಧ್ಯಕ್ಷೆಣಿಯವರೇ, ಮಾನ್ಯ ಮುಖ್ಯ ಮಂತ್ರಿಗಳು ಬಿಜಾಪುರದಲ್ಲಿ ಹೇಳಿಕೆ ಕೊಟ್ಟರತಕ್ಕಂಥಾದ್ದು ಇದಕ್ಕೆ ಮೂರಾಧಾರ ಇರಬಹುದು. ಶ್ರೀಮಾನ್ ಬಿಂಗಾರಪ್ಪನವರು ರೂಲ್ಸ್ 146 ಪ್ರಕಾರ ನೋಟೀಸ್ ಕೊಟ್ಟು ಈ ವಿಷಯವನ್ನು ಎತ್ತಬೇಕು ಎಂದು ತಮ್ಮ ಪರವಾನಗಿ ಕೇಳಿದ ಮೇಲೆ ತಮ್ಮ ಅಂತಿಮ ನಿರ್ಣಯ ಆಗಿರಲಿಲ್ಲ. ಶನಿವಾರ ಹೇಳುತ್ತಾರೆ ಎಂದು ಹೇಳಿದಿರಿ. ಆ ಸಂದರ್ಭದಲ್ಲಿ ಮುಖ್ಯ ಮಂತ್ರಿಗಳು ಸ್ಪಷ್ಟೀಕರಣ ಮಾಡಿದ್ದಾರೆ. ಈ ಸಭೆಯಲ್ಲಿ ನಾನು ಏನು ಬಿಜಾಪುರದಲ್ಲಿ ಹೇಳಿಕೆ ಕೊಟ್ಟಿದ್ದೇನೆ ಅದಕ್ಕೆ ಬದ್ಧನಾಗಿದ್ದೇನೆ ಎಂದು ಹೇಳಿದರು.

ಅಧ್ಯಕ್ಷರು.—ಅದೆಲ್ಲಾ ಪ್ರೊಸೀಡಿಂಗ್ಸ್‌ನಲ್ಲಿದೆ ?

ಶ್ರೀ ಎಚ್. ಡಿ. ದೇವೇಗೌಡ.—ಈ ಸಭೆಯಲ್ಲಿ ಆ ಕಡೆ ಇರುವ ಸದಸ್ಯರಿಗಾಗಲೀ, ಈ ಕಡೆ ಇರುವ ಸದಸ್ಯರಿಗಾಗಲೀ ಇಂತಹ ಪ್ರಚಾರಗಳು ಬಂದಾಗ ಮುಖ್ಯ ಮಂತ್ರಿಗಳ ಅಂತಿಮ ನಿಲುವು ಏನು ಎಂದು ಕೇಳುವುದಕ್ಕೆ ಹಕ್ಕಿದೆ ಎಂದು ನಾನು ತಿಳಿದುಕೊಂಡಿದ್ದೇನೆ.

ಅಧ್ಯಕ್ಷರು.—ಯಾವ ರೂಲ್ಸ್ ಪ್ರಕಾರ ಹೇಳುತ್ತಿದ್ದೀರಿ ?

ಶ್ರೀ ಎಚ್. ಡಿ. ದೇವೇಗೌಡ.—ಈ ಸಭೆಯಲ್ಲಿ ಮುಖ್ಯ ಮಂತ್ರಿಗಳು, ಅವರು ಬಿಜಾಪುರದಲ್ಲಿ ಏನು ಭಾಷಣ ಮಾಡಿದ್ದಾರೆ, ಅದಕ್ಕೆ ಬದ್ಧನಾಗಿದ್ದೇನೆ ಎಂದು ಹೇಳಿದ ಮೇಲೆ ಈ ಸಭೆಯ ಎಲ್ಲ ಸದಸ್ಯರಿಗೂ ಅದರ ಬಗ್ಗೆ ನಿಮ್ಮ ನಿಲುವು ಏನು ಎಂದು ಕೇಳುವ ಹಕ್ಕು ಇದೆ. ಬರೀ ಹೇಳಿಕೆ ಕೊಡುವುದರಿಂದ ಕೊನೆಗಾಣತಕ್ಕ ಪ್ರಶ್ನೆಯಲ್ಲ. ಅವರು ಒರದು ಪರತ್ತು ಹಾಕಿದ್ದಾರೆ. ಇದಕ್ಕೆ ಇಷ್ಟೊಂದು ಮಹತ್ವ ಬರುವುದಕ್ಕೆ ಕಾರಣವೇನೆಂದರೆ, ಕೇವಲ ಭ್ರಷ್ಟಾಚಾರ, ನ್ಯಜನ ಪಕ್ಷಪಾತ, ಹೆವರಿಟಿಸಂ ಎಂದು ಹೇಳುವುದಕ್ಕಿಂತ ಹೆಚ್ಚಾಗಿ ಒಂದು ಮಾತನ್ನು ಹೇಳಿದ್ದಾರೆ. ಈ 3 ಅಪಾದನೆಗಳಲ್ಲಿ ಯಾವುದಾದರೂ ಒಂದನ್ನು ಯಾರಾದರೂ ಪ್ರೂವ್ ಮಾಡುವುದಾದರೆ ನನ್ನ ಸ್ಥಾನ ತೆರವು ಮಾಡುತ್ತೇನೆ ಎಂದು ಸ್ಪಷ್ಟೀಕರಣ ಮಾಡಿದ್ದಾರೆ. ಮತ್ತು ಈ ಸಭೆಯಲ್ಲಿ ಆ ನಿಲುವಿಗೆ ಬದ್ಧನಾಗಿದ್ದೇನೆ ಎಂದು ಹೇಳಿದ್ದಾರೆ. ಇದು ಇಷ್ಟು ಪ್ರಾಶಸ್ತ್ಯ ಬರಲಿಕ್ಕೆ ಕಾರಣ. ಇದು ಬೇರೆ ಕಡೆ ಹೇಳುವ ಮಾತಲ್ಲ. ನಾನೂ ಕೂಡ ಹೇಳುತ್ತೇನೆ. ಆದು ಪ್ರೂವ್ ಆಗದೇ ಹೋದರೆ ನಾನೂ ಕೂಡ ಸ್ಥಾನ ತೆರವು ಮಾಡುತ್ತೇನೆ ಎಂದು. ಇದನ್ನು ಲಘುವಾಗಿ ಕಾಣಬಾರದು. ಪ್ರಜಾಪ್ರಭುತ್ವದಲ್ಲಿ ಸತ್ಸಂಪ್ರದಾಯಗಳನ್ನು ಹಾಕಬೇಕು ಎನ್ನುವ ವಿಶ್ವಾಸ ಯಾರಿಗಾದರೂ ಇದ್ದರೆ, ಪಕ್ಷದ ರಾಜಕಾರಣ ಮಾಡುವುದು ಬೇಡ, ಪಕ್ಷದ ರಾಜಕಾರಣ ಇದರಲ್ಲಿ ಬರುವುದಿಲ್ಲ. ಸತ್ಸಂಪ್ರದಾಯಗಳನ್ನು ಹಾಕಬೇಕು, ನೀತಿ ನಿಯಮಗಳನ್ನು ಅನುಸರಿಸಬೇಕು ಎಂದು ಇದ್ದರೆ, ಮುಖ್ಯ ಮಂತ್ರಿಗಳು ಬಿಜಾಪುರದಲ್ಲಿ ಕೊಟ್ಟ ಹೇಳಿಕೆಗೆ ಬದ್ಧನಾಗಿದ್ದೇನೆ ಎಂದು ಏನು ಹೇಳಿದ್ದಾರೋ ಆ ಒಂದೇ ಆಧಾರದ ಮೇಲೆ ಒಪ್ಪಿಕೊಳ್ಳಬೇಕು ಇಲ್ಲದಿದ್ದರೆ ಅವರು ಸ್ಥಾನ ತೆರವು ಮಾಡಬೇಕು, ಇಲ್ಲವೇ ನಾನು ಸ್ಥಾನ ತರವು ಮಾಡಬೇಕು. ಸ್ಪತಃ ನಾವೇ ದಿಗ್ಬಂಧನೆಗೆ ಒಳಗಾಗಿದ್ದೇವೆ. ಅದಕ್ಕೆ ಅವರ ಹೇಳಿಕೆ ಆಧಾರದ ಮೇಲೆ ಈ ಒಂದು ಹೇಳಿಕೆ ಕೊಟ್ಟಿದ್ದೇನೆ. ಶ್ರೀಮಾನ್ ನಾಗಣ್ಣನವರು ಭಾಷಣ ಮಾಡುತ್ತಾ ಒಂದು ಮಾತನ್ನು ಹೇಳಿದರು. ಏನೆಂದರೆ, ದೇವೇಗೌಡರಿಗೆ ಪ್ರೂವ್ ಮಾಡುವುದಕ್ಕೆ ಕಷ್ಟವಾಗಬಹುದು, ಮುಖ್ಯ ಮಂತ್ರಿಗಳು ತೇರ್ಗಡೆಯಾಗಬಹುದು ಎಂದು. ನಾನೂ ಕೂಡ ನನ್ನ ಜೀವನವನ್ನು ಸ್ವೀಕಾರಿ ಇಟ್ಟುಕೊಂಡಿದ್ದೇನೆ ; ನಾನೂ ಕೂಡ ರಾಜಕೀಯದಿಂದ ನಿವೃತ್ತಿಯಾಗುತ್ತೇನೆ ಎಂದು ಹೇಳಿದ್ದೇನೆ. ಇದು ಬಹಳ ಗಹನವಾದ ವಿಷಯ ಈ ಸಭೆಯಲ್ಲಿ ಮುಖ್ಯ ಮಂತ್ರಿಗಳು ತಾಳಿದಂಥ ನಿಲುವಿಗೆ ನಮ್ಮ ಪ್ರತಿಕ್ರಿಯೆ ಕೇಳಲಿಕ್ಕಾದರೂ ನಮ್ಮ ಅಧಿಕಾರವನ್ನು ಮೊಟಕು ಮಾಡಬಾರದು ಎಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಅಧಿಕಾರವನ್ನು ಮೊಟಕು ಮಾಡಬೇಕು ಎಂದು ಹೇಳಲಿಲ್ಲ. ನಾನು ಯಾವ ರೂಲ್ಸ್ ಪ್ರಕಾರ ಅವರನ್ನು ಕೇಳಬೇಕು ಎನ್ನುವುದನ್ನು ಹೇಳಿ. Please enlighten me.

ಶ್ರೀ ಕೋಣಂದೂರು ಲಿಂಗಪ್ಪ.—ಇದು ನಾವು ಬರೆದಿರುವ ರೂಲ್ಸ್, ಕೇಳುವುದಕ್ಕೆ ರೂಲ್ಸ್ ಇಲ್ಲದೇ ಹೋದರೂ ಕೂಡ ನ್ಯಾಯ ಸಮ್ಮತವಾದ ದೃಷ್ಟಿಯಿಂದ ಮತ್ತು.....

ಅಧ್ಯಕ್ಷರು. —ರೂಲ್ಸ್‌ನ್ನು ಜಾಸ್ತಿ ಮಾಡುವುದಕ್ಕೆ ಅಥವಾ ಇನ್ನೊಂದು ಸೇರಿಸುವುದಕ್ಕೆ ಈ ಮನೆಗೆ ಹಕ್ಕಿದೆ. ಅದನ್ನು ಮಾಡಿ, ಆಮೇಲೆ ಅದರಂತೆ ನಡೆಯೋಣ.

ಶ್ರೀ ಕೋಣಂದೂರು ಲಿಂಗಪ್ಪ.—ಸಾರ್ವಜನಿಕ ಹಿತದೃಷ್ಟಿಯಿಂದ.....

ಅಧ್ಯಕ್ಷರು.—ಅಮೆಂಡ್‌ಮೆಂಟ್ ತೆಗೆದುಕೊಂಡು ಬನ್ನಿ.

ಶ್ರೀ ಕೋಣಂದೂರು ಲಿಂಗಪ್ಪ.—ಕೆಲವು ವೇಳೆ ರೂಲ್ಸ್ ಬಿಟ್ಟು ನಾವು ಅನೇಕ ನಿರ್ಧಾರಗಳಿಗೆ ಬರಬೇಕಾಗುತ್ತದೆ. ಕಾನೂನು ಪ್ರಕಾರ ನ್ಯಾಯಗಳು, ಅನ್ಯಾಯಗಳು ಆಗಿರುತ್ತವೆ.

ಅಧ್ಯಕ್ಷರು.—ಅದಕ್ಕೆ ಸೂಕ್ತವಾದ ಅಮೆಂಡ್‌ಮೆಂಟ್ ತೆಗೆದುಕೊಂಡು ಬನ್ನಿ.

ಶ್ರೀ ಕೋಣಂದೂರು ಲಿಂಗಪ್ಪ.—ಅಮೆಂಡ್‌ಮೆಂಟ್ ತೆಗೆದುಕೊಂಡು ಬರುವುದು ಮಿನಿಸ್ಟರ್ ಕರ್ತವ್ಯ, ನಮ್ಮದಲ್ಲ. ಆದುದರಿಂದ ರಾಜಕೀಯ ಜೀವನದ ದೃಷ್ಟಿಯಿಂದ, ಸಾರ್ವಜನಿಕ ಹಿತದೃಷ್ಟಿಯಿಂದ.....

ಅಧ್ಯಕ್ಷರು.—ಆಶಯಗಳು ಬೇಕಾದಷ್ಟು ಇದ್ದರೂ ನಿಯಮಗಳ ಚೌಕಟ್ಟಿನಲ್ಲಿ ಇರಬೇಕಾಗುತ್ತದೆ.

ಶ್ರೀ ಕೋಣಂದೂರು ಲಿಂಗಪ್ಪ.—ಇವತ್ತು ನೀವು ರೂಲ್ಸ್‌ನ್ನು ಸಸ್‌ಪೆಂಡ್ ಮಾಡಲಕ್ಕೆ ಅವಕಾಶವಿದೆ. ಆ ದೃಷ್ಟಿಯಿಂದಲಾದರೂ ಯಾವುದಾದರೂ ರೂಲ್ಸ್‌ನ್ನು ಸಸ್‌ಪೆಂಡ್ ಮಾಡಿ ನಿಮ್ಮ ಹೇಳಿಕೆಯನ್ನು ಕೊಡಬೇಕೆಂದು ಅವರಿಗೆ ಹೇಳಿ. ಇಲ್ಲದಿದ್ದರೇ ವಿರೋಧ ಪಕ್ಷದ ನಾಯಕರು ಏನು ಚಾಲೆಂಜನ್ನು ಮಾಡಿದ್ದಾರೆ ಅದನ್ನು ಆಕ್ಸೆಪ್ಟ್ ಮಾಡುವುದಕ್ಕೆ ಸಿದ್ಧರಿಲ್ಲದಿದ್ದರೆ ಒಂದು ಹೇಳಿಕೆಯನ್ನು ಕೊಡಲಿ. ಇವತ್ತು ವಿರೋಧ ಪಕ್ಷದ ನಾಯಕರು ಏನು ಚಾಲೆಂಜ್ ಮಾಡಿದ್ದಾರೆ

(ಶ್ರೀ ಕೋಣಂದೂರು ಲಿಂಗಪ್ಪ)

ಅದನ್ನು ಒಪ್ಪಿಕೊಳ್ಳದೇ ಇದ್ದರೆ ಕಾಂಗ್ರೆಸ್ ಒಪ್ಪಿಕೊಳ್ಳುತ್ತಾ ಇಲ್ಲ, ಮುಖ್ಯ ಮಂತ್ರಿಗಳು ಒಪ್ಪಿಕೊಳ್ಳುತ್ತಾ ಇಲ್ಲ, ಆದುದರಿಂದ ವಿರೋಧ ಪಕ್ಷದ ನಾಯಕರು ಹೇಳಿದ್ದೆರಲ್ಲಾ ಸತ್ಯವೆಂದು ಹೇಳಬೇಕಾಗುತ್ತದೆ.

ಅಧ್ಯಕ್ಷರು.—ಇವತ್ತು ಮಾನ್ಯ ಸದಸ್ಯರು ಕಾರ್ಯಕರಾಪ ನಡೆಸುವುದಕ್ಕೆ ತಯಾರಾಗಿಲ್ಲವೆಂದು ಕಾಣುತ್ತದೆ. ಹೀಗಾದರೆ ಸಭೆಯನ್ನು ನಡೆಸುವುದು ಕಷ್ಟ. The house will now adjourn to meet at 1 p.m. tomorrow.

The House adjourned at Fifty Two Minutes past Four of the Clock to meet again at One of the Clock on Tuesday, the 3rd September 1974.

WD 1272—GPB—550—23-12-1974